

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 06 Issue : 318 Wednesday 08-05-2024 E-mail : maruti.b.hosamani76@gmail.com Page: 4 Price : Rs. 1/-

# ತಪ್ಪದೆ ಮತ ಚಲಾಯಿಸಿ...!



**ಪಿ.ಕೆ ನಾಗನೂರು :** ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಪಿಕೆ ನಾಗನೂರಿನಲ್ಲಿ ಮಾಜಿ ಉಪಮುಖ್ಯಮಂತ್ರಿಗಳ ಅಥಣಿ ತಾಲೂಕಿನ ಶಾಸಕರು ಹಾಗೂ ಕಾಂಗ್ರೆಸ್ ಮುಖಂಡರು ಹಾಗೂ ಸಮಾಜ ಸೇವಕರು ಶ್ರೀ ಚಿದಾನಂದ ಲಕ್ಷ್ಮಣ್ ಸವದಿ ತಮ್ಮ ಹಕ್ಕು ಚಲಾಯಿಸಿದರು. ತಪ್ಪದೇ ಚಲಾಯಿಸಬೇಕು. ಇಂದು ನಾನು ಮತದಾನ ಮಾಡಿದ್ದೇನೆ ಮಾಡಿ ತಮ್ಮ ಸಂವಿಧಾನ ಬದ್ಧ ಹಕ್ಕನ್ನು ಚಲಾಯಿಸಬೇಕು ಎಂದು ಮನವಿ ಮಾಡಿದ ಅವರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 20 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ವಿಶ್ವಾಸವಿದೆ .ಸಾಲಿನಲ್ಲಿ ನಿಂತು ಭಾಗ ಸಂಖ್ಯೆ 204 ರಲ್ಲಿ ಮತ ಚಲಾವಣೆ ಚಲಾಯಿಸಿದರು.

ಮತದಾನ ಪ್ರಕ್ರಿಯೆಯಲ್ಲಿ ಎಲ್ಲರೂ ತಪ್ಪದೇ ಭಾಗವಹಿಸಿ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಪ್ರಪಂಚದಲ್ಲಿ ಭಾರತ ಅತೀ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ದೇಶ. ಭಾರತದ ಚುನಾವಣಾ ವ್ಯವಸ್ಥೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಬಣ್ಣಿಸಿದರು.

ಮೊದಲ ಬಾರಿಗೆ ಮತದಾನದ ಹಕ್ಕು ಪಡೆದಿರುವ ಯುವ ಸಮೂಹ ಮತ್ತು ಯುವ ಪಡೆ ಮತದಾನದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡು ತಪದೇ ಮತದಾನ ಮಾಡುವಂತೆ ಯುವ ಮತದಾರರಿಗೆ ಕರೆ ನೀಡಿದರು. ಮತದಾನ ಪ್ರಜಾಪ್ರಭುತ್ವದ ಹಬ್ಬ ಎಲ್ಲರೂ ತಪ್ಪದೇ ಮತದಾನ ಮಾಡಿರಿ ಎಂದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್ : ಎಂ.ಎಂ. ಶರ್ಮಾ ಬೆಳಗಾವಿ.**

# ಅಂಬೇಡ್ಕರ್ ಮೌಲ್ಯ ಪಾಲಿಸುವತ್ತ ಡಾ. ಕಾಂತರಾಜ್ ಮುಂದು...






**ತರೀಕೆರೆ :** ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ತರೀಕೆರೆಯ ಕಂದಾಯ ಉಪ ವಿಭಾಗಾಧಿಕಾರಿಯಾಗಿ ಸದಾ ಸಕ್ರಿಯರಾಗಿರುವ ಡಾಕ್ಟರ್ ಕಾಂತರಾಜ್ ಅಂಬೇಡ್ಕರ್ ಮೌಲ್ಯಗಳು ಮತ್ತು ಸಂವಿಧಾನದ ಆಶಯಗಳು ಸದಾ ಅಚ್ಚ ಹಸಿರಾಗಿಸಲು ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಮೈಗೂಡಿಸಿ ಕೊಂಡಿರುವರು, ಅವರು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಮೇಲೆ ಇಟ್ಟಿರುವ ಗೌರವಾರ್ದಕ್ಕೆ ಇದೊಂದು ನಿದರ್ಶನ, ಒಬ್ಬ ನಿಷ್ಠಾವಂತ ಅಧಿಕಾರಿಯಾಗಿ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಇಲಾಖೆಯ ಅಧಿಕಾರಿ ವರ್ಗವನ್ನು ಸದಾ ಹಸನ್ಮುಖಿಯಾಗಿ ಕಾರ್ಯ ತತ್ಪರತೆಯಲ್ಲಿ ಮಿನುಗುತ್ತಿರುವ ನಕ್ಷತ್ರವೆಂದು ಕಾಂತರಾಜ್ ರವರನ್ನು ಹೆಸರಿಸಬಹುದಾಗಿದೆ ಪ್ರತಿನಿತ್ಯ ತಮ್ಮ ಕಚೇರಿ ಕೆಲಸ ಕಾರ್ಯಗಳಲ್ಲಿ ಪಾರದರ್ಶಕ ಆಡಳಿತ ನಡೆಸುವುದರೊಂದಿಗೆ ತಾಲೂಕಿನ ದೂರದ ಊರುಗಳಿಂದ ಜನ ಸಾಮಾನ್ಯರು ಬರುತ್ತಿದ್ದು ಸಾರ್ವಜನಿಕರ ಕೆಲಸ ಕಾರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿರುವುದಕ್ಕೆ ಸಾರ್ವಜನಿಕರಿಂದ ಈ ಅಧಿಕಾರಿಯ ಮೇಲೆ ಪ್ರಶಂಶ ಪೂರ್ವ ಭಾವನೆಗಳು ವ್ಯಕ್ತವಾಗುತ್ತಿರುವುದು ಸಾರ್ವಜನಿಕರ ಮತ್ತು ಅಧಿಕಾರಿ ವರ್ಗಗಳ ನಡುವಿನ ಮಹತ್ತರ ಸೇತು ಬಂಧವಾಗಿದೆ ಎಂದು ಹೇಳಬಹುದು

ಒಬ್ಬ ಅಧಿಕಾರಿಯಾಗಿ ಕಾಂತರಾಜ್ ಕೇವಲ ಕಚೇರಿಗಳಲ್ಲಷ್ಟೇ ಇರದೆ ಬಾಹ್ಯವಾಗಿ ಸಾರ್ವಜನಿಕರಿಂದ ಆಗಾಗಿ ದೂರುಗಳು ಬಂದಾಗ ಅದನ್ನು ನಿಭಾಯಿಸುವಲ್ಲಿ ತಮ್ಮ ಸಮಯ ಪ್ರಜ್ಞೆಗೆ ಸಾಕ್ಷಿ ಬೂತರಾಗಿರುತ್ತಾರೆ ಇಂತಹ ಸರಳ ವ್ಯಕ್ತಿತ್ವದ ಕಂದಾಯ ಉಪ ವಿಭಾಗಾಧಿಕಾರಿ ಕೇವಲ ತರೀಕೆರೆ ಮಾತ್ರ ಸೀಮಿತವಾಗದೆ ಕಡೂರು ಅಜ್ಜಂಪುರ ಎನ್ ಆರ್ ಪುರ ತಾಲೂಕಿನ ಜನ ಸಾಮಾನ್ಯರ ಸಮಸ್ಯೆಗಳಿಗೆ ಕ್ರಿಯಾಶೀಲರಾಗಿ ಸ್ಪಂದಿಸುತ್ತಿರುವುದು ಆ ಭಾಗದ ಜನರ ಒಂದು ಪುಣ್ಯ ಎಂದು ಭಾವಿಸುವುದರಲ್ಲಿ ಯಾವುದೇ ಅತಿಶೊಯೋಕ್ತಿ ಯಾಗಲಾರದು ಇಂತಹ ಒಬ್ಬ ಕ್ರಿಯಾಶೀಲ ಅಧಿಕಾರಿ ತಮ್ಮ ಅಧೀನ ನೌಕರರನ್ನು ಉತ್ತಮ ಮನಸ್ಥಿತಿಯ ನೌಕರ ವರ್ಗವನ್ನು ರೂಪಿಸುವುದಕ್ಕೆ ಈಗಾಗಲೇ ಸಾರ್ವಜನಿಕರಿಂದ ಕಾಂತರಾಜ್ ಅವರಿಗೆ ಪ್ರಶಂಸೆಯ ಮಹಾ ಪೂರವೇ ಹರಿದು ಬರುತ್ತಿದೆ.

ಇಂತಹ ಅಧಿಕಾರಿ ಇನ್ನಷ್ಟು ವರ್ಷ ಕಾಲ ತಮ್ಮ ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ದಲಿತರ, ನೊಂದವರ, ಶೋಷಿತ ಸಮುದಾಯಗಳಿಗೆ ನಿರಂತರ ದನಿಯಾಗಿ ಕೆಲಸ ಮಾಡಲೆಂದು ಸಾರ್ವಜನಿಕರು ಅಪೇಕ್ಷೆ ಪಡುತ್ತಿದ್ದಾರೆ ಯುವ ಸಮುದಾಯ ತಮ್ಮ ಮುಂದಿನ ಭವಿಷ್ಯದ ದಿಕ್ಸೂಚಿಯನ್ನು ಸಂಕ್ರಮಣದ ನಡಿಗೆಯಲ್ಲಿ ತೆಗೆದು ಕೊಂಡು ಹೋಗಲು ನಿಷ್ಠಾವಂತ ಮತ್ತು ಕರ್ತವ್ಯದ ಪ್ರತೀಕರಾದ ಡಾಕ್ಟರ್ ಕಾಂತರಾಜ್ ರವರ ಮಾರ್ಗದರ್ಶನ ಅತ್ಯವಶ್ಯಕವಾಗಿದ್ದು, ಯುವ ಸಮುದಾಯ ಕಾಂತರಾಜ್ ರವರ ಕಡೆ ಚಿತ್ತ ಹರಿಸಬೇಕಾಗಿದೆ

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎನ್. ವೆಂಕಟೇಶ್. ತರೀಕೆರೆ. ಚಿಕ್ಕ ಮಂಗಳೂರು**

# ಸ್ವಗ್ರಾಮದಲ್ಲಿ ಶಾಸಕ ಡಾ.ಎನ್.ಟಿ ಶ್ರೀ ನಿವಾಸ್ ಕುಟುಂಬದೊಂದಿಗೆ ಮತದಾನ




**ನರಸಿಂಹಗಿರಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗುಡೆಕೋಟೆ ಹೋಬಳಿಯ ನರಸಿಂಹಗಿರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ-86 ರಲ್ಲಿ ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದ ಶಾಸಕ ಡಾ.ಎನ್.ಟಿ ಶ್ರೀನಿವಾಸ್ ರವರು ತಮ್ಮ ಕುಟುಂಬದ ಸದಸ್ಯರೊಂದಿಗೆ ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಈ ವೇಳೆ ಮಾತನಾಡಿದ ಅವರು ಮತದಾನ ಪ್ರಜಾಪ್ರಭುತ್ವದ ಪರಮೋಚ್ಚ ಅಧಿಕಾರ, ಭವ್ಯ ಭಾರತದ ನಿರ್ಮಾಣಕ್ಕೆ, ರಾಷ್ಟ್ರ, ರಾಜ್ಯ ಅಭಿವೃದ್ಧಿಗೆ ಪ್ರಜಾಪ್ರಭುತ್ವದ ಅತ್ಯಂತ ಮಹತ್ವವಾದದ್ದು ಹಾಗಾಗಿ ಮತದಾನ ನಮ್ಮ ಸಂವಿಧಾನ ಬದ್ಧ ಹಕ್ಕು ಅದನ್ನು ತಪ್ಪದೆ ಪ್ರತಿಯೊಬ್ಬರು ಆದಷ್ಟು ಬೇಗನೆ ಮತ ಚಲಾವಣೆ ಮಾಡಿ ನಿಮ್ಮ ಹಕ್ಕನ್ನು ಚಲಾಯಿಸಲು ವಿನಂತಿಸಿದರು. ಈ ಸಂದರ್ಭದಲ್ಲಿ ಶಾಸಕರ ಧರ್ಮಪತ್ನಿ ಡಾ. ಪುಷ್ಪಾ ಹಾಗೂ ತಾಯಿ ಓಬಮ್ಮ ಎನ್.ಟಿ. ಬೊಮ್ಮಣ್ಣ ಹಾಗೂ ಸೋದರರಾದ ಎನ್.ಟಿ ತಮ್ಮಣ್ಣ ಕಾಂಗ್ರೆಸ್ ಮುಖಂಡರು ಸಮಾಜ ಸೇವಕರು, ಅವರ ಪತ್ನಿ ಲತಾ ಅವರು ತಮ್ಮ ಮತ ಚಲಾಯಿಸಿದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**

# 30ಕ್ಕೂ ಅಧಿಕ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆ



**ಮಹಾಲಿಂಗಪುರ :** ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ ನೇತೃತ್ವದಲ್ಲಿ, ವಿಜಯಕುಮಾರ ಸಬಕಾಳೆ ಜವಾಬ್ದಾರಿಯಲ್ಲಿ ಖ್ಯಾತ ಕ್ರಿಕೆಟ್ ಪಟು, ಪುರಸಭೆ ನಾಮನಿರ್ದೇಶಿತ ಮಾಜಿ ಸದಸ್ಯ ರವಿ ಬಿದರಿ, ನಾಯಕ ಸಮಾಜದ ಅಧ್ಯಕ್ಷ ಅರ್ಜುನ ನಾಯಕ, ಅಶೋಕ ನುಚ್ಚಿ, ಮಂಜು ಬಂಡಿ, ನಿಶಾಂತ ಬಂಡಿ, ಗಜಾನಂದ ಬಡಿಗೇರ, ರಾಮು ನಾಯಕ, ಮಹಾಲಿಂಗಪ್ಪ ಮಂಟೂರ, ನವೀನ ಬಂಡಿ, ಮಹಾಲಿಂಗಪ್ಪ ಹುಲಕುಂದ, ಭೀಮಶೀ ಚನ್ನದಾಸರ, ಮಹೇಶ ಬಡಿಗೇರ, ರವಿ ಕಲಾಲ, ವಿಜಯ ಇಬ್ರಾಹಿಂಪುರ ಸೇರಿದಂತೆ 30ಕ್ಕೂ ಅಧಿಕ ಕಾರ್ಯಕರ್ತರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಶ್ರೀಮಂತ ಹಳ್ಳಿ, ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಅಶೋಕಗೌಡ ಪಾಟೀಲ, ಮಹಾಲಿಂಗಪ್ಪ ಕುಳ್ಳೊಳ್ಳಿ, ಬಸವರಾಜ ಹಿಟ್ಟಿನಮಠ,

ಬಸವರಾಜ ಚಮಕೇರಿ, ಶಂಕರಗೌಡ ಪಾಟೀಲ, ಚನ್ನಪ್ಪ ಪಟ್ಟಣಶೆಟ್ಟಿ, ಮಹಾಲಿಂಗ ಮುದ್ದಾಪುರ, ಭಾಷಾ ಯಾದವಾಡ, ಹರೀಶ ನಾಯಕ, ಶಿವಾನಂದ ಹುಣಶ್ಯಾಳ ಸೇರಿದಂತೆ ಹಲವರು ಇದ್ದರು.

# ಜಿಲ್ಲಾ ಕಾರಾಗೃಹದಲ್ಲಿ 'ಪೋಷ್' ಕಾರ್ಯಕ್ರಮ ಯಶಸ್ವಿ



**ಕೊಪ್ಪಳ :** ಜಿಲ್ಲಾ ಕಾರಾಗೃಹ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ಮೇ 03 ರಂದು ಜಿಲ್ಲಾ ಕಾರಾಗೃಹದಲ್ಲಿ ಪೋಷ್ (POSH-Prevention of sexual harassment act-2013) ಬಗ್ಗೆ ಅರಿವು-ನೆರವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ.ಕಣವಿ ಹಾಗೂ ವಕೀಲರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿವಲೀಲಾ ಹೊನ್ನೂರು, ಕಾರಾಗೃಹದ ಅಧೀಕ್ಷಕರಾದ ವಿ.ಡಿ. ಚವ್ಹಾಣ, ಜೈಲರ್‌ರಾದ ರಾಮುಲು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಬಿಜೆಪಿ ಎಸ್.ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಅವರಿಂದ ಮತದಾನ

**ಕೂಡ್ಲಿಗಿ :** ಲೋಕಸಭಾ ಚುನಾವಣೆ ಅಂಗವಾಗಿ ನಡೆದ ಮತದಾನ ಪ್ರಕ್ರಿಯೆಯಲ್ಲಿ ಮಂಗಳವಾರ ಬೆಳಿಗ್ಗೆ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಸೊಲ್ಲಮ್ಮ ಶಾಲೆಯ ಮತಗಟ್ಟೆ ಸಂಖ್ಯೆ 44 ರಲ್ಲಿ ಬಿಜೆಪಿ ಎಸ್.ಟಿ ಮೋರ್ಚಾದ ರಾಜ್ಯ ಅಧ್ಯಕ್ಷರಾದ ಬಂಗಾರು ಹನುಮಂತು ಅವರು ಮತಗಟ್ಟೆಗೆ ತೆರಳಿ ಮತ ಚಲಾಯಿಸಿದರು.

ಈ ವೇಳೆ ಮಾತನಾಡಿದ ಅವರು ಮತದಾನವೆಂಬುದು ಸಂವಿಧಾನವು ಪ್ರಜೆಗಳಿಗೋಸ್ಕರ ಕಲ್ಪಿಸಿರುವ ಹಕ್ಕು. ಪ್ರಜೆಗಳೇ ತಮ್ಮ ಇಚ್ಚೆಯನುಸಾರ ನಾಯಕನನ್ನು ಆಯ್ಕೆ ಮಾಡಿ ತಮ್ಮ ಕ್ಷೇತ್ರ ಅಭಿವೃದ್ಧಿಪಡಿಸುವ ಸಲುವಾಗಿ, ತಮ್ಮ ಕ್ಷೇತ್ರದ ಪರವಾಗಿ ಸಂಸತ್ತಿಗೆ ಕಳಿಸುವ ಆಯ್ಕೆ ಇದಾಗಿದೆ.

ಮತದಾನ ದೇಶದ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯೂ ಹೌದು. ಸಮಗ್ರ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಭದ್ರತೆ-ಯ ದೃಷ್ಟಿಯಿಂದ ಇಂದಿನ ಮತದಾನ ಕಾರಣವಾಗಲಿದ್ದು, ಪ್ರಜ್ಞಾವಂತ ಮತದಾರರು ಮತದಾನದಿಂದ ದೂರ ಉಳಿಯಬೇಡಿ ಎಲ್ಲರಿಗೂ ಚಲಾಯಿಸಲು ಪ್ರೇರೆಪಿಸಿ ನೀವು




ಮತದಾನ ಮಾಡಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ.**

# ಚುನಾವಣೆ ವೀಕ್ಷಕರ ಭೇಟಿ



**ಇಂಡಿ :** ಬರುವ ಮೇ 7 ರಂದು ನಡೆಯುವ ಲೋಕಸಭೆ ಚುನಾವಣೆಯ ವೀಕ್ಷಕರಾಗಿ ಗುಜರಾಥದ ಡಾ॥ ರತನ್ ಕುಮಾರಿ ಕನವರ್ ಮತ್ತು ಬಿಹಾರದ ಆಯ್.ಆರ್.ಎಸ್ ನಲ್ಲಿ ಸೇವೆ ಸಲ್ಲಿಸುತ್ತಿರುವ ಅನುಪಕುಮಾರ ಇಂಡಿ ತಾಲೂಕಿಗೆ ಭೇಟಿ ನೀಡಿ ಇಲ್ಲಿಯ ಚುನಾವಣೆ ಪ್ರಕ್ರಿಯೆ ವೀಕ್ಷಿಸಿದರು.

ಸಾಮಾನ್ಯ ವೀಕ್ಷಕರಾಗಿ ಆಗಮಿಸಿದ ಡಾ॥ ರತನ್ ಕುಮಾರಿ ಹಿಂಗಣಿ ಮತ್ತು ಅಗರಖೇಡ ಚೆಕ್ ಪೋಸ್ಟ ಅದಲ್ಲಿದೆ ಮತಗಟ್ಟೆ ಕೇಂದ್ರಗಳಾದ ಲಚ್ಯಾಣ, ಬರಗುಡಿ, ಭೂಯ್ಯಾರ ಶಾಲೆಗಳ ಮತಗಟ್ಟೆ ಕೇಂದ್ರಗಳಿಗೆ, ಇಂಡಿ ವಾರ್ಡ ನಂ 1, ತಡವಲಗಾ ಶಾಲಾ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿದರು.

ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ ಮಸ್ಟರಿಂಗ ಮತ್ತು ಡಿ ಮಸ್ಟರಿಂದ ವ್ಯವಸ್ಥ ಪರೀಶಿಲಿಸಿದರು.

ನಂತರ ಪ್ರವಾಸಿ ಮಂದಿರದಲ್ಲಿ ಸೆಕ್ಟರ್ ಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡರು.

ಅನುಪಕುಮಾರ ಚುನಾವಣೆ ಖರ್ಚು ವೆಚ್ಚ ಪರಿಶೀಲಿಸಿದರು.

ಕಂದಾಯ ಉಪವಿಬಾಗಾಧಿಕಾರಿ ಅಬೀದ ಗದ್ಯಾಳ, ತಹಸೀಲ್ದಾರ ಮಂಜುಳಾ ನಾಯಕ, ಇಒ ನೀಲಗಂಗಾ ಬಬಲಾದ, ಪುರಸಭೆ ಮುಖ್ಯಾಧಿಕಾರಿ ಮುಖ್ಯಾದಿಕಾರಿ ಮಹಾಂತೇಶ ಹಂಗರಗಿ, ಎಚ್.ಎಸ್. ಗುನ್ನಾಪುರ, ಹೊನ್ನುಟಗಿ ಮತ್ತಿತರಿದ್ದರು.

## ಆರೋಗ್ಯ ಮತ್ತು ಆಧ್ಯಾತ್ಮಿಕಅರಿವು ಕಾರ್ಯಕ್ರಮ

# ಮನಸ್ಸು ಸ್ವಚ್ಛವಾಗಿಟ್ಟುಕೊಳ್ಳಿ; ಸಹಜಾನಂದಶ್ರೀ





**ಮಹಾಲಿಂಗಪುರ :** ನಮ್ಮ ಸ್ವರೂಪವನ್ನು ತಿಳಿಸಿಕೊಡುವ ಕನ್ನಡಿ ಸ್ವಚ್ಛಇದ್ದರೆ ನಮ್ಮ ಮುಖ ಕಾಣಿಸುತ್ತದೆ. ಆದರೆ, ಕನ್ನಡಿ ಸ್ವಚ್ಛಇರದಿದ್ದರೆ ನಮ್ಮ ಮುಖ ಕಾಣಿಸುವುದಿಲ್ಲ. ಅದೇರೀತಿ ನಮ್ಮ ಮನಸ್ಸಿನಲ್ಲಿರುವ ಪರಮಾತ್ಮಕಾಣಿಸಬೇಕೆಂದರೆ ನಮ್ಮ ಮನಸ್ಸು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದುಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿಹೇಳಿದರು. ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಸಿ.ಎಂ.ಹುರಕಡ್ಲಿ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಆರೋಗ್ಯ ಮತ್ತು ಆಧ್ಯಾತ್ಮಿಕ ಅರಿವು ಕಾರ್ಯಕ್ರಮದ ಆಶೀರ್ವಚನ ನೀಡಿದರು. ನಮ್ಮ ಮನಸ್ಸಿನಲ್ಲಿ ಪರಮಾತ್ಮನನ್ನು ತುಂಬಬೇಕಾಗುತ್ತದೆ.

ಮನಸಿನ ಪರಿಶುದ್ಧತೆಗೆ ಪ್ರಾಣಾಯಾಮ ಅಗತ್ಯ.ಆಹಾರ ಶುದ್ಧಇದ್ದರೆ ಅಂತಕರಣ ಶುದ್ಧವಾಗುತ್ತದೆ.ಮನಸ್ಸಿಟ್ಟು ಮಾಡಿದರೆ ಪರಮಾತ್ಮ ಪ್ರಕಟವಾಗುತ್ತಾನೆ ಎಂದರು.

ಹುಮಾಯೂನ ಸುತಾರ ಮಾತನಾಡಿ, ಶರೀರಕ್ಕೆ ಆಹಾರದಿಂದ ಶಕ್ತಿ ಸಿಗುತ್ತದೆ. ಅದೇ ಆಹಾರವನ್ನು ನಿಯಂತ್ರಿಸಿದರೆ ಅದರಿಂದಾಗುವ ಕೆಟ್ಟ ಕೆಲಸಗಳು ನಿಲ್ಲುತ್ತವೆ. ಅದಕ್ಕೆ ಉಪವಾಸ ಉತ್ತಮ ಪ್ರಕ್ರಿಯೆಯಾಗಿದೆ ಎಂದರು. ಮನಗುಂಡಿಯ ಮಹಾಮನೆಯ ಬಸವಾನಂದ ಸ್ವಾಮೀಜಿ ಪ್ರವಚನ ನೀಡಿದರು.ಸಿದ್ಧಾನಂದ ಭಾರತಿ ಸ್ವಾಮೀಜಿ, ಯೋಗಗುರು ಮಹಾಂತೇಶ ಹಿರೇಮಠ, ಫೌಂಡೇಶನ್ ಸಂಸ್ಥಾಪಕ ಚನಬಸು ಹುರಕಡ್ಲಿ ಇದ್ದರು.ಕಾರ್ಯಕ್ರಮದಲ್ಲೇ ಬಸವಾನಂದ ಸ್ವಾಮೀಜಿ ಅವರ ಚಿತ್ರ ರಚಿಸಿ ಶಿವಾನಂದ ನೀಲನ್ನವರ ಗಮನಸೆಳೆದರು. ಹತ್ತು ದಿನದ ನಿಸರ್ಗಚಿಕಿತ್ಸಾ ಶಿಬಿರದಲ್ಲಿ ಜೇನುತುಪ್ಪಹಾಗೂ ಲಿಂಬೆಹಣ್ಣು,ಸ್ಪಿರುಲಿನಾ ಮಾತ್ರೆ ಬಳಸಿ ವಿವಿಧ ಕಾಯಿಲೆಗಳಿಗೆ ಬಸವಾನಂದ ಸ್ವಾಮೀಜಿ ನಿತ್ಯ ನೂರಾರು ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

# ಕೆಎಲ್‌ಇ ಪಾಲಿಟೆಕ್ನಿಕ್‌ನಲ್ಲಿ “ಯಶಸ್ವಿ” ವಾರ್ಷಿಕ ಸ್ನೇಹಸಮ್ಮೇಳನ

## ತಾಂತ್ರಿಕ ವಿದ್ಯಾರ್ಥಿಗಳು ರಾಷ್ಟ್ರ ಪ್ರಗತಿಯ ರಾಯಭಾರಿಗಳಾಗಬೇಕು: ಗೋಪೇಶ್ವರದಾಸ



**ಮಹಾಲಿಂಗಪುರ** : ವಿದ್ಯಾರ್ಥಿಗಳು ಉತ್ತಮ ಬದುಕಿನ ರೂವಾರಿಗಳಗಬೇಕು, ಅದರಲ್ಲೂ ತಾಂತ್ರಿಕ ವಿದ್ಯಾರ್ಥಿಗಳು ರಾಷ್ಟ್ರ ಪ್ರಗತಿಯ ರಾಯಭಾರಿಗಳಾಗಬೇಕು ಎಂದು ಬೃಂದಾವನ ಗುರುಕುಲದ ರೂವಾರಿ ಗೋಪೇಶ್ವರದಾಸ ಕಮತಿ ಹೇಳಿದರು.

ಸ್ಥಳೀಯ ಕೆಎಲ್‌ಇ ಡಿಪ್ಲೋಮಾ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಯಶಸ್ವೀ ಎಂಬ ವಾರ್ಷಿಕ ಸ್ನೇಹಸಮ್ಮೇಳನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು. ಭವಿಷ್ಯತ್ತಿನ ಬಗ್ಗೆ ಭಯ ತೊರೆದು ಆತ್ಮವಿಶ್ವಾಸದಿಂದ ಪ್ರಯತ್ನ ಮಾಡಬೇಕು. ಪ್ರತಿಫಲ ಯಾವುದೇ ಬಂದರೂ ಸ್ವೀಕರಿಸುವ ಗಟ್ಟಿ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಸಮೀರವಾಡಿಯ ಜಿಬಿಎಲ್ ಕಂಪನಿಯ ಜನರಲ್ ಮ್ಯಾನೇಜರ್, ಸೈಂಟಿಸ್ಟ್ ಡಾ.ರಮೇಶ ಶೆಟ್ಟರ ಮಾತನಾಡಿ, ಕಾಲೇಜು ನಿಮಗೇನು ಕೊಟ್ಟಿದೆಯೋ ಅದನ್ನು ಸರಿಯಾಗಿ ಬಳಸಿಕೊಂಡು ಆ ಕಾಲೇಜಿಗೆ ನೀವು ಉತ್ತಮ ಫಲಿತಾಂಶದ ಉಡುಗೊರೆ ಕೊಡಬೇಕು. ಸಾಧನೆ ಮಾಡಿ ಹೆತ್ತವರಿಗೂ, ಜ್ಞಾನವಿತ್ತವರಿಗೂ ಕೀರ್ತಿ ತರಬೇಕು ಎಂದರು.

ಪ್ರಾಚಾರ್ಯ ಎಸ್.ಐ.ಕುಂದಗೋಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಘನವೆತ್ತ ಭಾರತದ ತಾಂತ್ರಿಕ ವಿದ್ಯಾರ್ಥಿಗಳು ನೀವಾಗಿದ್ದೀರಿ. ನಿಮ್ಮ ಭವಿಷ್ಯ ನಿರೂಪಿಸಿಕೊಳ್ಳುವುದರೊಂದಿಗೆ ಭವ್ಯ ಭಾರತದ ಭವಿಷ್ಯತ್ತು ನಿರ್ಮಿಸುವ ಜವಾಬ್ದಾರಿ ವಹಿಸಿಕೊಳ್ಳಿ ಎಂದರು. ಕಾನಿಪ ಸಂಘದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಮಾತನಾಡಿದರು.

ಸಿಪಾಯಿಗಳಿಗೆ ಗೌರವ ಸಲ್ಲಿಸಿದರು:

ವೇದಿಕೆ ಮುಂಭಾಗದ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ಆರಂಭವಾದ ಕಾರ್ಯಕ್ರಮದಲ್ಲಿ ಮೊದಲು ಕಾಲೇಜಿನಲ್ಲಿ ಸಷೇವೆ ಸಲ್ಲಿಸುತ್ತಿರುವ ಎಲ್ಲ ಸಿಪಾಯಿಗಳಿಗೆ, ಸ್ವಚ್ಚತಾ ಸಿಬ್ಬಂದಿಗೆ ವೇದಿಕೆ ಮೇಲೆ ಕರೆದು ಸಾಮೂಹಿಕವಾಗಿ ಸನ್ಮಾನಿಸುವ ಮೂಲಕ ಗೌರವ ಸಲ್ಲಿಸಲಾಯಿತು. ಅವರಿಗೆ ಕಾರ್ಮಿಕ ದಿನಾಚರಣೆಯ ಶುಭಾಶಯ ತಿಳಿಸಲಾಯಿತು.

ಎಲ್ಲ ವಿಭಾಗಗಳ ಅಂತಿಮವರ್ಷದ ವಿದ್ಯಾರ್ಥಿಗಳಿಗೆ ಎಕ್ಸೀಕ್ಯೂಟಿವ್ ಬ್ಯಾಗ್ ನೀಡುವ ಮೂಲಕ ಮುಂದಿನ ಔದ್ಯೋಗಿಕ ಜೀವನಕ್ಕೆ ಶುಭ ಹಾರೈಸಲಾಯಿತು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಯಲ್ಲಿ ತಮ್ಮ ಅನುಭವ ಹಂಚಿಕೊಂಡರು. ಇದೇ ಕಾಲೇಜಿನ ವಿದ್ಯಾರ್ಥಿ ರಾಹುಲ್ ಪತ್ತಾರ ರಚಿಸಿ, ಹಾಡಿ ಸಿದ್ದಪಡಿಸಿರುವ ಟೆನ್ಶನ್ ಎಂಬ ಪಾಪ್ ಮತ್ತು ರ್‍ಯಾಪ್ ಸಾಂಗ್ ಬ್ರೋಚರ್ ಬಿಡುಗಡೆ ಮಾಡಲಾಯಿತು.

ಪ್ರಾಚಾರ್ಯ ಎಸ್.ಐ.ಕುಂದಗೋಳ, ಉಮೇಶ ಹಾದಿಮನಿ, ಸುಭಾಸ್ ಮೂಶಿ, ಅನಿಕೇತ ತಾರದಾಳೆ, ಪ್ರಿಯಾ ಸೋನಾರ, ಲಕ್ಷ್ಮೀ ನಾಯಕ, ಚೈತ್ರಾ ಹುದ್ದಾರ, ಲಕ್ಷ್ಮೀ ಅಂಗಡಿ, ವಂದನಾ ಪಸಾರ, ಅಮಿತ ಜಾಧವ, ಮಹಾದೇವಿ ಅಂಬಿ, ಸವಿತಾ ಗೊಂದಿ, ಸವಿತಾ ಬೀಳಗಿ, ಅಂಜನಾ ಮಾಲಜ, ಮಂಜುನಾಥ ಅರಕೇರಿ, ಪ್ರವೀಣ ಅವರಾದಿ, ನಿರ್ಮಲಾ ಫಕೀರಪುರ, ಈಶ್ವರ ಹೂಲಿ, ಚೇತನ ಕುಂದರಗಿ, ಪ್ರಕಾಶ ಬಡಿಗೇರ, ಗೀತಾ ಉಪಾಸೆ, ಶಿಲ್ಪಾ ಬೀರನಗಡ್ಡಿ ಹಾಗೂ ಸಿಬ್ಬಂದಿ ಇದ್ದರು.

# ಹಿರಿಯರು, ವಿಕಲಚೇತನರಿಗೆ ಮತಗಟ್ಟೆಗೆ ತೆರಳಲು ವಾಹನ ವ್ಯವಸ್ಥೆ

**ಬಾಗಲಕೋಟೆ** :: ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಮತದಾನ ದಿನದಂದು ಮತ ಚಲಾಯಿಸಲು ಅನುಕೂಲವಾಗುವಂತೆ ಬಾಗಲಕೋಟೆ ಪಟ್ಟಣದ ಹಿರಿಯ ನಾಗರಿಕರಿಗೆ ಹಾಗೂ ವಿಕಲಚೇತನರಿಗೆ ನಗರಸಭೆಯಿಂದ ವಾಹನ ವ್ಯವಸ್ಥೆ ಮಾಡಲಾಗಿದೆ. ಮೇ 7 ಮತದಾನ ದಿನದಂದು ಮತದಾನ ಕೇಂದ್ರಕ್ಕೆ ತೆರಳಲು ಹಾಗೂ ಮತದಾನ ಕೇಂದ್ರದಿಂದ ಮನೆಗೆ ತೆರಳು ವಾಹನದ ಅವಶ್ಯತೆ ಇದ್ದಲ್ಲಿ ನಗರಸಭೆ ಕಾರ್ಯಾಲಯದ ರಾಜು ಕೊಟಬಾಗಿ (8971073989) ಇವರನ್ನು ಸಂಪರ್ಕಿಸಿ ವಾಹನ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ನಗರಸಭೆ ಪೌರಾಯುಕ್ತ ವಾಸಣ್ಣ ಆರ್. ತಿಳಿಸಿದ್ದಾರೆ.

# “ಸಹಕಾರ ರತ್ನ” ಪ್ರಕಾಶ ತಪಶೆಟ್ಟಿ

ಅಣ್ಣ ಬಸವಣ್ಣನ ಹೆಸರು ಅಜರಾಮರ, ವಿಶ್ವಮಾನ್ಯ ಅವರ ಹೆಸರಿಟ್ಟ ಸಂಸ್ಥೆಗೂ ಅದೇ ಕೀರ್ತಿ, ಇದು ಶಾಶ್ವತ, ಇದಕ್ಕೊಂದು ಉದಾಹರಣೆ ಬಾಗಲಕೋಟೆಯ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ, ನೂರು ವರ್ಷದ ಸಂಭ್ರಮ ಕಂಡ ಈ ಸಹಕಾರಿ ಬ್ಯಾಂಕಿನ ಸಾಧನೆಯ ನೋಟ ಸಿಂಹಾವಲೋಕನ ಮಾಡಿದರೆ ಅಣ್ಣ ಬಸವಣ್ಣನ ಪ್ರೇರಣೆ, ಚೈತನ್ಯ ಈ ಸಂಸ್ಥೆಗೆ ಸಿಕ್ಕಿದೆ. ಅದರ ಪರಿಣಾಮ ವಿಶ್ವಮಾನ್ಯವಾಗಿ ಬೆಳೆಯುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ. ಕಳೆದ 4 ದಶಕಗಳಿಂದ ಬ್ಯಾಂಕಿನ ಸಾರಥ್ಯ ವಹಿಸಿ ಬ್ಯಾಂಕನ್ನು ಅಭಿವೃದ್ಧಿ ಪಥದೆಡೆಗೆ ಕೊಂಡೊಯ್ಯುತ್ತಿರುವ ಪ್ರಕಾಶ ತಪಶೆಟ್ಟಿಯವರ ಕಾರ್ಯ ಶ್ಲಾಘನೀಯ.

ಸಮಾಜದ ಸರ್ವತೋಮುಖ ಏಳ್ಗೆಗಾಗಿ ಶ್ರದ್ಧೆಯಿಂದ ದುಡಿಯುತ್ತಿರುವವರನ್ನು ಗೌರವಿಸುವದು, ಸತ್ಕರಿಸುವುದು. ಸುಸಂಸ್ಕೃತ ಸಮಾಜದ ಲಕ್ಷಣ, ಸಹಕಾರಿ ಕ್ಷೇತ್ರಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಪ್ರಕಾಶ ತಪಶೆಟ್ಟಿಯವರು ಸಾಮಾಜಿಕ, ಧಾರ್ಮಿಕ, ಸಹಕಾರಿ ಕ್ಷೇತ್ರಗಳಲ್ಲಿ ತ್ರಿಕರ್ಣಪೂರ್ವಕ ಸೇವಾಭಾವದಿಂದ ಸ್ಪಂದಿಸುತ್ತಿದ್ದಾರೆ. ಕರ್ನಾಟಕ ಭೂಷಣ ಹಾಗೂ ವಿಶ್ವೇಶ್ವರಯ್ಯ ಮತ್ತು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಪ್ರಕಾಶ ತಪಶೆಟ್ಟಿಯವರ 72ನೇ ಹುಟ್ಟು ಹಬ್ಬ ಇಂದು ಸರಳ ರೀತಿಯಲ್ಲಿ ಜರುಗಲಿದೆ. ಒಬ್ಬ ವ್ಯಕ್ತಿ ತನ್ನಲ್ಲಿ ಅಡಗಿರುವ ಸುಪ್ತ ಪ್ರತಿಭೆಯಿಂದಾಗಿ ವಿವಿಧ ರಂಗಗಳಲ್ಲಿ ವಿಜೃಂಭಿಸಿ ಯಾವ ರೀತಿಯಲ್ಲಿ ಸಮಾಜಕ್ಕೆ ದಾರಿ ದೀಪವಾಗುತ್ತಾರೆಂಬುದನ್ನು ಬಾಗಲಕೋಟದ ಪ್ರಕಾಶ ತಪಶೆಟ್ಟಿಯವರನ್ನು ನೋಡಿ ಅರಿಯಬೇಕು.

ಸಹಕಾರ, ಕ್ರೀಡೆ, ವ್ಯಾಪಾರ ಯಾವುದೇ ಕ್ಷೇತ್ರವಿರಲಿ, ಅಲ್ಲಿ ಪ್ರಕಾಶ ತಪಶೆಟ್ಟಿಯವರ ಹೆಜ್ಜೆ ಗುರುತು ಮೂಡಿರುತ್ತದೆ. ಉತ್ತಮ ಸಹಕಾರಿ, ಸಮಾಜ ಸೇವೆ, ಕಾರ್ಯಕರ್ತ, ಶಿಕ್ಷಣ ಹಾಗೂ ಕೃಷಿ ಪ್ರೇಮಿಗಳಾದ ಪ್ರಕಾಶರವರು ಬಾಗಲಕೋಟೆಯ ಈಶ್ವರಪ್ಪ–ಮಹಾನಂದಾ ದಂಪತಿ ಪುತ್ರನಾಗಿ 1953 ರ ಮೇ 6 ರಂದು



ಜನಿಸಿದರು. ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬಿ.ಕಾಂ. ಪದವಿ, ಜತೆಗೆ ಡಿ. ಫಾರ್ಮ ಮುಗಿಸಿದರು. ವ್ಯಾಸಂಗದೊಟ್ಟಿಗೆ ಕ್ರೀಡೆಯಲ್ಲೂ ಆಸಕ್ತಿ ಹೊಂದಿ, ಟೇಬಲ್ ಟೆನಿಸ್‌ದಲ್ಲಿ ಯುನಿರ್ವಸಿಟಿ ಬ್ಲೂ ಆಗಿದ್ದರು. ಪ್ರಗತಿಪರ ಕೃಷಿಕರಾದ ತಪಶೆಟ್ಟಿಯವರು, ಬೀಜ ಗೊಬ್ಬರ ಮತ್ತು ತಂಬಾಕು ವ್ಯಾಪಾರದಲ್ಲಿ ಪಳಗಿದ್ದಾರೆ.

1985 ರಿಂದ 1988 ರ ವರಗೆ ನಗರ ಸಭೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಉತ್ತಮ ಆಡಳಿತ ಹಾಗೂ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ, ನಗರ ಸಭೆಗೆ ಎರಡು ಬಾರಿ ರಾಜ್ಯ ಪ್ರಶಸ್ತಿ ಲಭಿಸುವಂತೆ ಮಾಡಿದ ಖ್ಯಾತಿ ಅವರದು. ಬಿ.ಟಿ.ಡಿ.ಎ ಸಭಾಪತಿಗಳಾಗಿ, ಸಂತ್ರಸ್ತರ ಮನೆಮನೆಗಳಿಗೆ ಹೋಗಿ ಪರಿಹಾರಧನದ ಚೆಕ್ ವಿತರಿಸಿದ್ದು ಸಂತ್ರಸ್ತರ ಸಮಸ್ಯಗಳಿಗೆ ಸ್ಪಂದಿಸಿ ಮಾನವೀಯತೆ ಮೆರೆದಿದ್ದಾರೆ.

1983 ರಿಂದ ರಾಜ್ಯದ ಪ್ರತಿಷ್ಠಿತ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಪಾವಧಿಯಲ್ಲಿ 27 ಶಾಖೆಗಳನ್ನು ಆರಂಭಿಸಿದಲ್ಲದೆ, ಪ್ರಧಾನ ಕಚೇರಿ ಸೇರಿದಂತೆ ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಿದ್ದು ಉತ್ತರ ಕರ್ನಾಟಕದ ಮೊಟ್ಟ ಮೊದಲಿಗೆ ಕೋರ ಬ್ಯಾಂಕಿಂಗ್, SMS ಬ್ಯಾಂಕಿಂಗ್, ATM ಸೇವೆಯನ್ನು ಪ್ರಾರಂಭಿಸಿದ ಕೀರ್ತಿ ಇವರದಾಗಿದೆ.

**ಆಧುನಿಕ ಹೆಜ್ಜೆ** : ಜಾಗತೀಕರಣ ಮತ್ತು ಖಾಸಗೀಕರಣದ ಹಿನ್ನೆಲೆಯಲ್ಲಿ ಮೂರುವರೆ ದಶಕಗಳಿಂದ ಸಹಕಾರ ಬ್ಯಾಂಕಿನ ಕ್ಷೇತ್ರದಲ್ಲಿ ವೃತ್ತಿಪರತೆ, ಪಾರದರ್ಶಕತೆ, ಉತ್ತರದಾಯಿತ್ವ, ತಾಂತ್ರಿಕತೆ, ಗ್ರಾಹಕ ಸೇವೆ, ಲಾಬದಾಯಕತೆ ಮುಂತಾದ ವಿಷಯಗಳಲ್ಲಿ ಬ್ಯಾಂಕಿಗೆ ಆಧುನಿಕ ಸ್ಪರ್ಶ ನೀಡಿದರು. ನವನಗರದ ಹೃದಯ ಭಾಗ ಸೆಕ್ಟರ ನಂ.25 ರಲ್ಲಿ ವಿಶಾಲವಾದ ಜಾಗೆಯಲ್ಲಿ, ಅತ್ಯಂತ ಸುಂದರವಾದ ಹಾಗೂ ಬೃಹತ್ ಪ್ರಧಾನ ಕಚೇರಿಯನ್ನು ಸ್ಥಾಪಿಸಬೇಕೆಂಬ ತಪಶೆಟ್ಟಿಯವರ ಕನಸು ನನಸಾಗಿದೆ. ಬ್ಯಾಂಕಿನ ಪ್ರಧಾನ ಕಚೇರಿ ಹಾಗೂ ಶಾಖೆಗಳು ಆಧುನಿಕತೆಯ ಎಲ್ಲ ಸೇವಾ ಸೌಲಭ್ಯಗಳನ್ನು ಹೊಂದಿ, ರಾಷ್ಟೀಕೃತ ಬ್ಯಾಂಕುಗಳಿಗಿಂತಲೂ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸುತ್ತಿರುವುದು ತಪಶೆಟ್ಟಿಯವರ ದೂರ ದೃಷ್ಟಿಗೆ ಸಾಕ್ಷಿಯಾಗಿದೆ.

**ಬೆರಳಿನಲ್ಲೇ ಬ್ಯಾಂಕಿಂಗ್** : ಗ್ರಾಹಕರಿಗೆ ಅತ್ಯುತ್ತಮ ಸೇವಾ ಸೌಲಭ್ಯ ನೀಡುವ ದೃಷ್ಟಿಯಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಬ್ಯಾಂಕಿಗೆ ಅಳವಡಿಸಿದ್ದಾರೆ. ಕೋರ್ ಬ್ಯಾಂಕಿಂಗ್ ತಂತ್ರಜ್ಞಾನ, ರಾಜ್ಯದ ಸಹಕಾರ ಬ್ಯಾಂಕುಗಳಲ್ಲಿ ಪ್ರಪ್ರಥಮವಾಗಿ ಏ.ಟಿ.ಎಮ್ ವ್ಯವಸ್ಥೆ ಪ್ರಾರಂಭಿಸಿ, ಯಾವುದೇ ರಾಷ್ಟೀಕೃತ ವಾಣಿಜ್ಯ ಬ್ಯಾಂಕುಗಳ ಎ.ಟಿ.ಎಮ್ ಗಳಲ್ಲಿ ಹಾಗೂ ಬೇರೆ ಯಾವುದೇ ಬ್ಯಾಂಕುಗಳ ಎ.ಟಿ.ಎಮ್ ಕಾರ್ಡನ್ನು ಬ್ಯಾಂಕಿನ ಎ.ಟಿ.ಎಮ್ ನಲ್ಲಿ ಬಳಸಿ ಹಣ ಪಡೆಯುವ ವ್ಯವಸ್ಥೆ ಮಾಡಿದ್ದಾರೆ. ಐ.ಎಫ್.ಎಸ್.ಸಿ ಕೋಡ, ಆರ್.ಟಿ.ಜಿ.ಎಸ್ ಹಾಗೂ ಎನ್.ಇ.ಎಫ್.ಟಿ ಮುಖಾಂತರ ಹಣ ವರ್ಗಾವಣೆ, ಸಂಪೂರ್ಣ ಗಣಕೀಕೃತ ಸೌಲಭ್ಯ ನೆಟ್ ವರ್ಕ ಬ್ಯಾಂಕಿಂಗ್ ಸೌಲಭ್ಯ ಹೀಗೆ ತಪಶೆಟ್ಟಿಯವರು ಗ್ರಾಹಕರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿರುವುದು ಶ್ಲಾಘನೀಯ.

**ಪ್ರಶಸ್ತಿ ಪುರಸ್ಕಾರಗಳು** : ಕರ್ನಾಟಕ ಭೂಷಣ ಪ್ರಶಸ್ತಿ (18.01.2004) ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರಧಾನ (14.03.2004) ‘ಸಹಕಾರಿ ರತ್ನ’ ಪ್ರಶಸ್ತಿ ಪ್ರಧಾನ (14.11.2012). ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮನೆ, ಮಠ ಕಳೆದುಕೊಂಡ ಸಂತ್ರಸ್ತರ ನೋವಿಗೆ ಸ್ಪಂದಿಸಿ ಮಾನವೀಯತೆ ಮೆರೆದಿದ್ದಾರೆ. ರಾಷ್ಟ್ರ ಪ್ರಶಸ್ತಿ ವಿಜೇತ ಬಾಗಲಕೋಟ ತುರಾಯಿ ಹಲಗೆ ಮೇಳ ಸಮಿತಿ ಅಧ್ಯಕ್ಷರಾಗಿ, ಕೇರಳದ ಓಣಂ ಉತ್ಸವ ಹಾಗೂ ದಿಲ್ಲಿಯ ಹೂಗಳ ಹಬ್ಬದಲ್ಲಿ ಪಾಲ್ಗೊಂಡು ಪ್ರಥಮ ಬಹುಮಾನ ಪಡೆದಿದ್ದಾರೆ. ರಾಜ್ಯ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಹಾಕಿ ಪಂದ್ಯಾವಳಿ ಹಾಗೂ ಅಥ್ಲೆಟಿಕ್ ಕ್ರೀಡಾಕೂಟಗಳನ್ನು ಏರ್ಪಡಿಸಿದ್ದರು.

ಮುಂಬೈನ ಹೈಬ್ರಿಡ್ ಸೀಡ್ಸ್ ಕಂಪನಿಯವರು ಪ್ರಾಯೋಜಿಸಿದ ಕೃಷಿ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಂಡು ಸಿಂಗಪೂರ, ಹಾಂಗ್‌ಕಾಂಗ್, ಥೈಲ್ಯಾಂಡ್ ದೇಶಗಳಿಗೆ ಭೇಟಿ ನೀಡಿ–ದ್ದಾರೆ. ಅಮೆರಿಕಕ್ಕೂ ಹೋಗಿ ಅಲ್ಲಿನ ಆಧುನಿಕ ಕೃಷಿ ಕ್ರಾಂತಿಯನ್ನು ಮೆಚ್ಚಿದ ಅವರು ಅದನ್ನು ಕಾರ್ಯರೂಪದಲ್ಲಿ ತಂದು ಯಶಸ್ವಿ ಕೃಷಿಕರಾಗಿದ್ದಾರೆ.

ಪ್ರಕಾಶ ತಪಶೆಟ್ಟಿಯವರಿಗೆ ಭಗವಂತನು ಆಯುರಾರೋಗ್ಯ, ಭಾಗ್ಯವನ್ನು ಕರುಣಿಸಿ, ಮತ್ತಷ್ಟು ಜನಸೇವೆ ಮಾಡಲು ಅವಕಾಶವನ್ನು ಕೊಟ್ಟು ಆಶೀರ್ವದಿಸಲಿ ಎಂದು ಶುಭ ಹಾರೈಸುವೆವು.

* * *

● ಮಹಾಬಳೇಶ್ವರ ಎಸ್. ಗುಡಗುಂಟಿ. ಬಾಗಲಕೋಟ

# ಸ್ವಚ್ಛತೆಯೇ ಶಕ್ತಿ



ಭಾರತದಲ್ಲಿ ಪ್ರತಿ ವರ್ಷ ಸುಮಾರು ಮೂರು ಲಕ್ಷದಷ್ಟು ಮಕ್ಕಳು ವಾಂತಿ ಮತ್ತು ಭೇದಿಯಿಂದ ಸಾವನ್ನಪ್ಪುತ್ತಾರೆ. ವಾಂತಿ ಮತ್ತು ಭೇದಿಗಳು ಕಲುಷಿತ ನೀರು ಮತ್ತು ಆಹಾರಸೇವನೆಯಿಂದ ಉಂಟಾಗುವ ಕಾರಣ ಈ ಕಾಯಿಲೆಗಳು ಹೆಚ್ಚಾಗಿದ್ದಲ್ಲಿ ಅದು ಆ ದೇಶದ ಆರೋಗ್ಯವ್ಯವಸ್ಥೆ ಮತ್ತು ಶುಚಿತ್ವದಲ್ಲಿನ ಲೋಪದೋಷಗಳಿಗೆ ಹಿಡಿದ ಕೈಗನ್ನಡಿಯಾಗುತ್ತದೆ.

ಪ್ರಪಂಚದ ಮುಂದುವರಿದ ದೇಶಗಳಲ್ಲಿ ಆರೋಗ್ಯವ್ಯವಸ್ಥೆ, ನೀರಿನ ಸರಬರಾಜು, ಶೌಚಾಲಯ ಮತ್ತು ಶುಚಿತ್ವದ ವ್ಯವಸ್ಥೆಯು ಉತ್ತಮವಾಗಿರುವ ಕಾರಣ ಅಲ್ಲಿನ ಜನರು, ಮುಖ್ಯವಾಗಿ ಮಕ್ಕಳು, ವಾಂತಿ ಭೇದಿಯ ಕಾಯಿಲೆಗೆ ಕಡಿಮೆ ತುತ್ತಾಗುತ್ತಾರೆ.

ಸುಮಾರು ಇನ್ನೂರು ವರ್ಷಗಳಲ್ಲಿ ಪ್ರಪಂಚದಾದ್ಯಂತ ಲಕ್ಷಾಂತರ ಜನರ ಸಾವಿಗೆ ಕಾರಣವಾದ ಕಾಲೆರಾ ಕಾಯಿಲೆಯು ಕಲುಷಿತವಾದ ನೀರಿನಿಂದ ಬರುತ್ತದೆಯೆಂಬುದನ್ನು ವಿಜ್ಞಾನಿ ಜಾನ್‌ಸ್ನೋ ಕಂಡುಹಿಡಿದನಂತರ ಶುದ್ಧವಾದ ನೀರು ಮತ್ತು ಆರೋಗ್ಯಕ್ಕೆ ಇರುವ ನಂಟಿನ ಬಗ್ಗೆ ಜನರಲ್ಲಿ ಹೆಚ್ಚು ಜಾಗೃತಿ ಮೂಡಿತು.

ವಾಂತಿಮತ್ತುಭೇದಿಯನ್ನುಉಂಟುಮಾಡುವ ವೈರಸ್ ಮತ್ತು ಬ್ಯಾಕ್ಟೀರಿಯಾಗಳು ನೀರು ಮತ್ತು ಆಹಾರದ ಮೂಲಕ ಜನರ ದೇಹವನ್ನು ಪ್ರವೇಶ ಮಾಡುತ್ತವೆ. ಅವು ಮನುಷ್ಯನ ಹೊಟ್ಟೆ ಮತ್ತು ಕರುಳಿನಲ್ಲಿ ಸೋಂಕನ್ನು ಉಂಟುಮಾಡಿ ನೀರು ಮತ್ತು ಆಹಾರ ಜೀರ್ಣವಾಗದಂಥ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಕರುಳಿನೊಳಗೆ ನೀರು ಮತ್ತು ಲವಣಾಂಶಗಳು ರಕ್ತವನ್ನು ಸೇರದೆ ಉಳಿದುಕೊಂಡರೆ ಅವು ವಾಂತಿ ಮತ್ತು ಭೇದಿಯ ರೂಪದಲ್ಲಿ ದೇಹದಿಂದ ಹೊರಹಾಕಲ್ಪಡುತ್ತವೆ. ಕೆಲವು ಕೀಟಾಣುಗಳು ಕರುಳಿನಲ್ಲಿ ಗಾಯವನ್ನು ಮಾಡಿದರೆ ಭೇದಿಯಲ್ಲಿ ರಕ್ತವೂ ಹೊರಹೋಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳಿಂದ ರೋಗಿಯ ದೇಹದಲ್ಲಿ ನೀರ ಮತ್ತು ಲವಣದ ಅಂಶದ ಕೊರತೆಯುಂಟಾಗಿ ದೇಹ ನಿಸ್ತೇಜವಾಗುತ್ತದೆ. ದೇಹದಿಂದ ಹೊರಹೋಗುತ್ತಿರುವ ನೀರು ಮತ್ತು ಲವಣದ ಪ್ರಮಾಣವು ಅತಿಯಾದಲ್ಲಿ ಮತ್ತು ರೋಗಿಗೆ ಡ್ರಿಪ್ಸ್ ಅಥವಾ ಬಾಯಿಯ ಮೂಲಕ ನೀರು ಮತ್ತು ಲವಣಗಳನ್ನು ನೀಡಲು ವಿಳಂಬವಾದರೆ ವಾಂತಿ?ಭೇದಿಗಳಿಂದ ಪ್ರಾಣಹಾನಿಯೂ ಆಗಬಹುದು. ಚಿಕ್ಕ ಮಕ್ಕಳು ತಮಗೆ ಬಾಯಾರಿದಾಗ ಅವರೇ ನೀರನ್ನು ಕೇಳಿ ಕುಡಿಯುವ ಸಾಧ್ಯತೆಗಳು ಕಡಿಮೆ. ಅವರ ದೇಹದಲ್ಲಿ ನೀರಿನ ಕೊರತೆ–ಯುಂಟಾದಾಗ ಕಂಡುಬರುವ ಸಮಸ್ಯೆಗಳನ್ನು ಎದುರಿಸುವ ಶಕ್ತಿಯೂ ಕಡಿಮೆಯಿರುತ್ತದೆ. ಈ ಕಾರಣಗಳಿಂದಾಗಿ ವಾಂತಿ–ಭೇದಿಯ ಕಾಯಿಲೆಯು ಮಕ್ಕಳಲ್ಲಿ ಹೆಚ್ಚಿನ ಸಾವು?ನೋವನ್ನು ಉಂಟುಮಾಡುತ್ತದೆ.

ಭಾರತದಲ್ಲಿ ಇನ್ನೂ ಬಯಲು ಶೌಚಾಲಯದ ಪದ್ಧತಿಯು ಗ್ರಾಮೀಣ ಭಾಗದಲ್ಲಿ ಚಾಲ್ತಿಯಲ್ಲಿದೆ. ಜನರು ಸಾಬೂನು ಬಳಸಿ ಕೈ ತೊಳೆಯುವುದನ್ನು ಗ್ರಾಮೀಣ ಭಾಗಗಳಲ್ಲಿ ಪಾಲಿಸುವುದಿಲ್ಲ. ಜನರು ಕುಡಿಯುವ ನೀರಿಗೆ ಬಳಸುವ ಕೆರೆ ಮತ್ತು ನದಿಗಳಲ್ಲಿಯೇ ಜಾನುವಾರುಗಳನ್ನು ತೊಳೆಯುತ್ತಾರೆ, ಬಟ್ಟೆಗಳನ್ನು ಒಗೆಯುತ್ತಾರೆ. ನಗರಗಳಂತೆ ಕ್ಲೋರಿನ್ ಬಳಸಿ ಕೀಟಾಣುಗಳನ್ನು ನಿಯಂತ್ರಿಸಿದ ನೀರು ಗ್ರಾಮೀಣ ಭಾಗಗಳಲ್ಲಿ ಸರಬರಾಜಾಗುವುದಿಲ್ಲ. ಈ ಕಾರಣಗಳಿಂದ ವಾಂತಿ?ಭೇದಿಯ ಸಮಸ್ಯೆ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಮಹಾನಗರಗಳ ‘ಸ್ಲಂ’ಗಳಲ್ಲಿಯೂ ಸೂಕ್ತ ನೀರಿನ ಸರಬರಾಜು ಮತ್ತು ಶುಚಿತ್ವವಿಲ್ಲದಿರುವ ಕಾರಣ ಅಲ್ಲಿಯೂ ವಾಂತಿಭೇದಿಯ ಕಾಯಿಲೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ರಸ್ತೆಬದಿಯಲ್ಲಿ ಮಾರುವ ತಿಂಡಿ ತಿನಿಸುಗಳ ಮೇಲೆ ಕುಳಿತಿರುವ ನೊಣ ಮತ್ತು ಕೀಟಗಳು ಕೂಡ ವಾಂತಿ ಭೇದಿಯನ್ನುಂಟುಮಾಡುವಕೀಟಾಣುಗಳನ್ನು ಪಸರಿಸುತ್ತವೆ. ಮಾಂಸಾಹಾರ ಮತ್ತು ಚೆನ್ನಾಗಿ ಬೇಯಿಸದ ಆಹಾರದಲ್ಲಿ ಕೀಟಾಣುಗಳು ಹೆಚ್ಚು ಬೇಗ ಬೆಳೆಯುವ ಕಾರಣ ಜನರು ರಸ್ತೆ ಬದಿಯಲ್ಲಿ ಆಹಾರ ಸೇವಿಸುವಾಗ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಹಸಿ ತರಕಾರಿಗಳನ್ನು ಬೇಯಿಸದೆ ಸಲಾಡ್ ಮೂಲಕ ಸೇವಿಸುವವರು ತರಕಾರಿಯನ್ನು ಚೆನ್ನಾಗಿ ತೊಳೆಯುವುದರಿಂದ ಅದರ ಮೇಲಿರುವ ಕೀಟಾಣುಗಳ ಜೊತೆಗೆ ತರಕಾರಿಗೆ ಅಂಟಿರುವ ರಾಸಾಯನಿಕಗಳೂ ಹೊಟ್ಟೆಗೆ ಹೋಗುವುದನ್ನು ತಡೆಯಬಹುದು. ನವಜಾತ ಶಿಶುಗಳ ಹೊಟ್ಟೆ ಮತ್ತು ಕರುಳಿನಲ್ಲಿ ರೋಗ ನಿರೋಧಕ ಶಕ್ತಿಯು ಕಡಿಮೆಯಿರುವ ಕಾರಣ ಮೊದಲ ಆರು ತಿಂಗಳು ತಾಯಿಯ ಹಾಲನ್ನು ಮಾತ್ರ ಕುಡಿಸಬೇಕು. ವಾಂತಿ ಭೇದಿಯ ಸಮಸ್ಯೆಯಿಂದ ಆಗ ಶಿಶುವನ್ನು ಪಾರುಮಾಡಬಹುದು.

‘ರೋಟಾ ವೈರಸ್’ ಒಂದು ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳಲ್ಲಿ ಮಾರಣಾಂತಿಕ ವಾಂತಿ?ಭೇದಿಯನ್ನು ಉಂಟು ಮಾಡುತ್ತಿತ್ತು. ಆದರೆ ಮಗುವಿಗೆ ಮೊದಲ ಆರು ತಿಂಗಳಲ್ಲಿ ‘ರೋಟಾ ವೈರಸ್ ಲಸಿಕೆ’ಯನ್ನು ನೀಡಲಾಗುತ್ತದೆ. ಇದರಿಂದ ಭಾರತದಂತಹ ದೇಶದಲ್ಲಿ ರೋಟಾ ವೈರಸ್ ಭೇದಿಯ ಪ್ರಮಾಣ ಬಹಳ ಇಳಿಮುಖವಾಯಿತು, ಲಕ್ಷಾಂತರ ಮಕ್ಕಳ ಜೀವ ಉಳಿಯಿತು. ವಾಂತಿ?ಭೇದಿಯಲ್ಲಿ ದೇಹದಿಂದ ನೀರಿನ ಜೊತೆಗೆ ಲವಣಗಳೂ ಹೊರ ಹೋಗುವುದರಿಂದ ‘ಓಆರ್‌ಎಸ್’ ಮಿಶ್ರಿತ ನೀರನ್ನು ಕುಡಿಸುವುದರಿಂದ ದೇಹದಲ್ಲಿನ ನೀರಿನ ಮತ್ತು ಲವಣದ ನಷ್ಟವನ್ನು ಸರಿದೂಗಿಸಬಹುದು. ‘ಓಆರ್ ಎಸ್’ ಪುಡಿಯನ್ನು ಒಂದು ಲೀಟರ್ ಕುದಿಸಿ ಆರಿಸಿದ ನೀರಿಗೆ ಬೆರೆಸಿ ನಿಯಮಿತವಾಗಿ ತೆಗೆದುಕೊಂಡಾಗ ದೇಹಕ್ಕೆ ಚೈತನ್ಯ ಬರುತ್ತದೆ. ತಮ್ಮ ಊರಿನಲ್ಲಿ ಅಥವಾ ಕೇರಿಯಲ್ಲಿ ವಾಂತಿಭೇದಿಯ ಕಾಯಿಲೆ ಕಾಣಿಸಿಕೊಂಡಾಗ ಜನರು ಕುದಿಸಿ ಆರಿಸಿದ ನೀರನ್ನು ಬಳಸಬೇಕು. ಆಗ ಈ ಕಾಯಿಲೆಯನ್ನು ಉಂಟುಮಾಡುವ ಕೀಟಾಣುಗಳು ಹರಡುವುದನ್ನು ತಡೆಯಬಹುದು. ಬಹುಪಾಲು ವಾಂತಿ?ಭೇದಿಯ ಕಾಯಿಲೆಗಳನ್ನು ವೈರಸ್‌ಗಳೇ ಉಂಟುಮಾಡುತ್ತವೆ. ಈ ಕಾರಣದಿಂದ, ವಾಂತಿ?ಭೇದಿಯಿರುವ ಎಲ್ಲ ರೋಗಿಗಳಿಗೆ ಆ?ಯಂಟಿಬಯಾಟಿಕ್ ಅಗತ್ಯವಿರುವುದಿಲ್ಲ.

ದೇಹದಿಂದ ಹೊರಹೋಗುವ ನೀರು ಮತ್ತು ಲವಣದ ಪ್ರಮಾಣವನ್ನು ‘ಓಆರ್‌ಎಸ್’ ಮೂಲಕ ನೀಡಿದಲ್ಲಿ ದೇಹವು ಶೀಘ್ರವಾಗಿ ಚೇತರಿಸಿಕೊಳ್ಳುತ್ತದೆ. ಅತ್ಯಂತ ಕಡಿಮೆ ದರದಲ್ಲಿ ಸಿಗುವ ‘ಓಆರ್‌ಎಸ್’ ಉಳಿಸಿರುವಷ್ಟು ಜೀವಗಳನ್ನು ಪ್ರಪಂಚದ ಯಾವ ದುಬಾರಿ ಔಷಧಿಗಳೂ ಉಳಿಸಿಲ್ಲ.

ಕುದಿಸಿದ ನೀರು ಮತ್ತು ಚೆನ್ನಾಗಿ ಬೇಯಿಸಿದ ಆಹಾರವನ್ನು ಸೇವಿಸುವುದರ ಜೊತೆಗೆ ಶುಚಿತ್ವದತ್ತ ಗಮನ ನೀಡಿದರೆ ವಾಂತಿ ಮತ್ತು ಭೇದಿಯ ರೋಗಗಳು ಹರಡುವುದನ್ನು ಕಡಿಮೆ ಮಾಡಬಹುದು. ಶುಚಿತ್ವವಿರುವ ಕಡೆ ಆರೋಗ್ಯ ಸಮಸ್ಯೆಗಳು ತನ್ನಿಂದ ತಾನೆ ಕಡಿಮೆಯಾಗುತ್ತವೆ.

* * *

– ಕೃಪೆ : ಪ್ರ.ವಾ


ಡಾ. ಕುಶ್ವಂತ್ ಕೋಳಿಬೈಲು

# ಬಿರುಬಿಸಿಲಿನಲ್ಲಿ ಕಣ್ಣಿನ ರಕ್ಷಣೆ

ಬಿಸಿಲು ತೀವ್ರವಾಗುತ್ತಿದ್ದಂತೆ ದೂಳು ಮತ್ತು ಮಾಲಿನ್ಯದಿಂದಾಗಿ ಕಣ್ಣುಗಳಿಗೆ ಹಾನಿಯಾಗುವ ಸಾಧ್ಯತೆ ಹೆಚ್ಚು.

ಈ ಬೇಸಿಗೆಯಲ್ಲಿ ಕಣ್ಣಿನ ತಪಾಸಣೆ ನಿಯಮಿತ ವಾಗಿರಬೇಕು. ಶುಷ್ಕತೆ, ಕಂಜಕ್ಟಿವಿಟೀಸ್ ಮತ್ತು ಯುವಿ ಕಿರಣಗಳಿಂದ ಕಣ್ಣುಗಳನ್ನು ರಕ್ಷಣೆ ಮಾಡಿಕೊಳ್ಳಬೇಕು. ಬೇಸಿಗೆಯ ಈ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುವುದು ಅನಿವಾರ್ಯ ಎನ್ನುತ್ತಾರೆ ಅಗರ್‌ವಾಲ್ ಐ ಆಸ್ಪತ್ರೆಯ ಪ್ರಾದೇಶಿಕ ಮುಖ್ಯಸ್ಥ ಡಾ. ಡಿ.ಕೆ.ಶ್ರೀಪತಿ.

ಬಿರು ಬೇಸಿಗೆಗೆ ಕಣ್ಣಲ್ಲಿ ನೀರಿನ ಉತ್ಪಾದನೆ ಕಡಿಮೆಯಾಗುವುದರಿಂದ ಕಿರಿಕಿರಿ ಉಂಟಾಗುವುದಲ್ಲದೇ ಬ್ಯಾಕ್ಟೀರಿಯಾ ಸೋಂಕು ಹೆಚ್ಚಳವಾಗುತ್ತದೆ. ಇದ–



ರಿಂದ ಕ್ಯಾಟ್ರ್ಯಾಕ್ಟ್ ಮತ್ತು ಮ್ಯಾಕ್ಯುಲರ್ ಡಿಜನರೇಶನ್‌ನಂಥ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಹಾಗಾಗಿ ಸಕಾಲದಲ್ಲಿ ಕಣ್ಣಿನ ಆರೈಕೆ ಮಾಡಿಕೊಳ್ಳುವುದು ಮುಖ್ಯ ಎನ್ನುತ್ತಾರೆ ಅವರು.

ಕಣ್ಣುಗಳಲ್ಲಿ ಶುಷ್ಕತೆ ಉಂಟಾದರೆ ವೈದ್ಯರ ಶಿಫಾರಸ್ಸಿನ ಮೇರೆಗೆ ಲ್ಯೂಬ್ರಿಕೆಂಟ್ ಐ ಡ್ರಾಪ್‌ಗಳನ್ನು ಬಳಸಬಹುದು. ಮೊದಲಿಗೆ ಶುಚಿತ್ವ ಕಾಪಾಡಿಕೊಳ್ಳಬೇಕು. ಆಗಾಗ್ಗೆ ಕೈ ತೊಳೆದುಕೊಳ್ಳಬೇಕು. ವಿನಾಕಾರಣ ಕಣ್ಣನ್ನು ಉಜ್ಜಿಕೊಳ್ಳುವುದು ಕೂಡ ಸೋಂ–ಕಿಗೆ ಕಾರಣವಾಗಬಹುದು. ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ಧರಿಸುವ ವ್ಯಕ್ತಿಗಳು, ಶುಚಿತ್ವ–ಕ್ಕೆ ಆದ್ಯತೆ ನೀಡಬೇಕು. ಕಣ್ಣಿನ ದೃಷ್ಟಿಗೆ ತೊಂದರೆಯಾಗದಂತೆ ಆರೋಗ್ಯವನ್ನು



ಕಾಪಾಡಿಕೊಳ್ಳುವುದು ಮುಖ್ಯ ಎಂದು ಹೇಳಿದ್ದಾರೆ.

ಯುವಿ ಶೀಲ್ಡ್ ಇರುವ ಕನ್ನಡಕಗಳನ್ನು ಧರಿಸಬೇಕು. ನಿರ್ಜಲೀಕರಣವನ್ನು ತಡೆಯಲು ಸಾಕಷ್ಟು ದ್ರವಾಹಾರವನ್ನು ಸೇವಿಸಬೇಕು. ಕ್ಲೋರಿನೇಟೆಡ್ ನೀರು ಬಳಸುವಾಗ ಕಡ್ಡಾಯವಾಗಿ ಸ್ವಿಮ್ಮಿಂಗ್ ಕನ್ನಡಕಗಳನ್ನು ಧರಿಸಬೇಕು. ಸ್ಕ್ರೀನಿಂಗ್ ಸಮಯವನ್ನು ಕಡಿಮೆ ಮಾಡಿ. ಪ್ರತಿ 20 ನಿಮಿಷಗಳಿಗೊಮ್ಮೆ ವಿರಾಮ ತೆಗೆದುಕೊಳ್ಳಿ. ಎ ವಿಟಮಿನ್ ಇರುವ ಹಣ್ಣು, ತರಕಾರಿಗಳ ಸೇವನೆ ಹೆಚ್ಚಿರಲಿ. ಬೇಸಿಗೆ ಇರಲಿ, ಮಳೆಗಾಲವಿರಲಿ ಕಣ್ಣಿನ ರೋಗಗಳನ್ನು ಸಕಾಲದಲ್ಲಿ ಪತ್ತೆ ಮಾಡಿ, ಚಿಕಿತ್ಸೆ ಪಡೆಯುವುದು ಮುಖ್ಯ ಎನ್ನುತ್ತಾರೆ ಅವರು.

– ಕೃಪೆ : ಪ್ರ.ವಾ

## ಧಾರವಾಡ ಲೋಕಸಭೆ ಸಾರ್ವತ್ರಿಕ ಚುನಾವಣೆ

# ಜಿಲ್ಲೆಯ ಮತದಾರ ಆಗಿರುವ ಚುನಾವಣಾ ಕರ್ತವ್ಯನಿರತ ಸಿಬ್ಬಂದಿ, ಅಧಿಕಾರಿಗಳು ಜಿಲ್ಲೆಯ ಯಾವುದೇ ಮತಗಟ್ಟೆಯಲ್ಲಿ ಇಡಿಸಿ ನೀಡಿ, ಇವಿಎಂ ಮೂಲಕ ಮತಚಲಾಯಿಸಬೇಕು: ಚುನಾವಣಾಧಿಕಾರಿ ದಿವ್ಯ ಪ್ರಭು





**ಧಾರವಾಡ :** ಧಾರವಾಡ ಲೋಕಸಭೆ ಮತಕ್ಷೇತ್ರದಲ್ಲಿ ಚುನಾವಣಾ ಕರ್ತವ್ಯ ನಿಯೋಜಿತರಾದ ಸಿಬ್ಬಂದಿ, ಅಧಿಕಾರಿಗಳು ಧಾರವಾಡ ಲೋಕಸಭಾ ಮತಕ್ಷೇತ್ರದ ಮತದಾರರಾಗಿದ್ದು ಮತ್ತು ಚುನಾವಣಾ ಆಯೋಗ ನಿಗದಿಪಡಿಸಿದ ದಿನಾಂಕದೊಳಗೆ ಮತದಾನಕ್ಕಾಗಿ ನಿಗಧಿತ ನಮೂನೆ 12ಎ ದಲ್ಲಿ ಅರ್ಜಿ ಸಲ್ಲಿಸಿದಲ್ಲಿ ಅಂತವರಿಗೆ ಇಡಿಸಿ (ಎಲೆಕ್ಷಣ ಡ್ಯೂಟಿ ಸರ್ಟಿಪಿಕೆಟ್) ನಮೂನೆಯನ್ನು ನೀಡಲಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.
ಈ ಕುರಿತು ಪ್ರಕಟಣೆ ನೀಡಿರುವ ಅವರು, ಚುನಾವಣಾ ಕರ್ತವ್ಯನಿರತರಾದ ಧಾರವಾಡ ಜಿಲ್ಲೆಯ ಮತದಾರರು, ತಾವು ಕರ್ತವ್ಯ ನಿರ್ವಹಿಸುವ ಮತಗಟ್ಟೆ ಅಥವಾ ತಮ್ಮ ಸಮೀಪದ ಮತಗಟ್ಟೆಯಲ್ಲಿ ಮತದಾನ ದಿನದಂದು ಎಲ್ಲ ಮತದಾರರಂತೆ ಇವಿಎಂ ಮತಯಂತ್ರದ (ಬ್ಯಾಲೇಟ್ ಯಂತ್ರ) ಮೂಲಕ ಮತಚಲಾಯಿಸಬೇಕು ಎಂದು ಅವರು ತಿಳಿಸಿದ್ದಾರೆ.


ಆದರೆ ಬೇರೆ ಜಿಲ್ಲೆಯ ಮತದಾರರಾಗಿದ್ದು, ಧಾರವಾಡ ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ, ಅಧಿಕಾರಿಗಳು ಚುನಾವಣಾ ಆಯೋಗ ನಿಗಧಿಪಡಿಸಿದ ಅವಧಿಯಲ್ಲಿ ಅಂಚೆಮತಪತ್ರ ಕೋರಿ ನಮೂನೆ 12 ಅನ್ನು ಸಲ್ಲಿಸಿದಲ್ಲಿ, ಅವರ ಕೋರಿಕೆಯನ್ನು ಅವರು ಮತದಾರರಾಗಿರುವ ಲೋಕಸಭೆ ಮತಕ್ಷೇತ್ರದ ಚುನಾವಣಾಧಿಕಾರಿಗಳಿಗೆ ಕಳುಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.
ನಂತರ ಸಂಬಂದಿಸಿದ ಚುನಾವಣಾಧಿಕಾರಿಗಳು ಇವರ ಕೋರಿಕೆಯನ್ನು ಪರಿಶೀಲಿಸಿ, ಮತದಾರರ ವಿವರ ಖಚಿತಪಡಿಸಿಕೊಂಡು, ಅವರ ಅಂಚೆಮತಪತ್ರ ಸಿದ್ದಪಡಿಸಿ, ಮತದಾರರು ಕರ್ತವ್ಯನಿರತ ಜಿಲ್ಲೆಗೆ ವಿನಿಮಯ ಕೇಂದ್ರದ ಮೂಲಕ ಕಳುಹಿಸಿರುತ್ತಾರೆ.
ಅಂತಹ ಮತದಾರರು ಕರ್ತವ್ಯ ನಿರತ ಜಿಲ್ಲೆಯಲ್ಲಿ ಸ್ಥಾಪಿಸಿರುವ ಅಂಚೆಮತಪತ್ರ ಸೌಲಭ್ಯ ಕೇಂದ್ರ (ಫೆಸಿಲಿಟೆಶನ್ ಸೆಂಟರ್)ದಲ್ಲಿ ಅಂಚೆಮತಪತ್ರದ ಮೇಲೆ ನಿಯಮಾನುಸಾರ ಮತ ಚಲಾಯಿಸುತ್ತಾರೆ ಎಂದು ಚುನಾವಣಾಧಿಕಾರಿಗಳು ಹೇಳಿದ್ದಾರೆ.
ಚುನಾವಣಾ ಕರ್ತವ್ಯನಿರತ ಮತದಾರರಲ್ಲಿ ಅಂಚೆಮತಪತ್ರ ಮತ್ತು ಇಡಿಸಿ ಮೂಲಕ ಮತಚಲಾಯಿಸುವ ಎರಡು ಬೇರೆಬೇರೆ ವರ್ಗಗಳು ಆಗಿರುವದರಿಂದ, ಈ ಬಗ್ಗೆ ಸರಿಯಾದ ಮಾಹಿತಿ ಪಡೆಯದೇ, ಇಡಿಸಿಗಳಿಗೆ ಅರ್ಹರಾದ ಮತದಾರರು ಆಯಾ ಇಲಾಖೆ ನೋಡಲ್ ಅಧಿಕಾರಿಗಳಿಂದ ಇಡಿಸಿ ಪಡೆಯದೇ, ಅಂಚೆಮತಪತ್ರ ಸೌಲಭ್ಯ ಕೇಂದ್ರಕ್ಕೆ ಬಂದು ಗೊಂದಲಕ್ಕೆ ಒಳಪಡುತ್ತಿರುವದರಿಂದ ಅವರಿಗೆ ತಿಳುವಳಿಕೆ ನೀಡಿ, ಮತದಾನದಿದಂದು ಮತ ಚಲಾಯಿಸುವಂತೆ ಸೂಚಿಸಿ, ತಿಳಿಹೇಳಲಾಗಿದೆ.
ಮೇ 1,2 ಮತ್ತು 3 ರಂದು ಮೂರು ದಿನಗಳ ಕಾಲ, ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಅಂಚೆಮತಪತ್ರದ ಮೇಲೆ ಮತದಾನ ಮಾಡಲು ಅವಕಾಶ ನೀಡಿ, ಕಳೆದ ಒಂದು ವಾರದಿಂದ ಆಯಾ ಇಲಾಖೆಗಳಿಗೆ ಮಾಹಿತಿ ನೀಡಿ, ಮಾಧ್ಯಮಗಳ ಮೂಲಕ ಈ ಕುರಿತು ಪ್ರಕಟಣೆ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.
ಇಂದು ಬೆಳಿಗ್ಗೆ ಧಾರವಾಡ ತಹಸಿಲ್ದಾರ ಕಚೇರಿಯಲ್ಲಿ ಸ್ಥಾಪಿಸಿರುವ ಸೌಲಭ್ಯ ಕೇಂದ್ರಕ್ಕೆ, ಶಿಗ್ಗಾಂವಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ಕರ್ತವ್ಯನಿರತ ಬೇರೆ ಲೋಕಸಭೆ ಮತಕ್ಷೇತ್ರಗಳ ಮತದಾರರಾಗಿರುವ ಪೊಲೀಸ್ ಹಾಗೂ ಇತರ ಸಿಬ್ಬಂದಿಗಳು ತಪ್ಪು ತಿಳುವಳಿಕೆಯಿಂದ ಅಂಚೆಮತದಾನಕ್ಕೆ ಆಗಮಿಸಿದ್ದರು. ಅವರಿಗೆ ತಿಳುವಳಿಕೆ ನೀಡಿ, ನಿಮ್ಮ ಅಂಚೆಮತಪತ್ರಗಳು ಹಾವೇರಿ ಜಿಲ್ಲಾಧಿಕಾರಿಗೆ ಬಂದಿರುತ್ತವೆ. ಶಿಗ್ಗಾಂವಿ ವಿಧಾನಸಭಾ ಮತಕ್ಷೇತ್ರ ಧಾರವಾಡ ಲೋಕಸಭೆ ವ್ಯಾಪ್ತಿಗೆ ಒಳಪಟ್ಟರೂ, ಅದು ಹಾವೇರಿ ಜಿಣಟಿಜಜ-ಜಿಟಿಜ ಜಿಲ್ಲೆಯ ತಾಲೂಕು ಆಗಿರುವದರಿಂದ ಹಾವೇರಿಯಲ್ಲಿ ಸ್ಥಾಪಿಸಿರುವ ಅಂಚೆಮತಪತ್ರ ಸೌಲಭ್ಯ ಕೇಂದ್ರದಲ್ಲಿ ತಾವು ಮತ ಚಲಾಯಿಸಬೇಕಾಗುತ್ತದೆ.
ಇಡಿಸಿ ಮತದಾನ ಸೌಲಭ್ಯ ಹಾಗೂ ಅಂಚೆಮತಪತ್ರದ ಮತದಾನ ಸೌಲಭ್ಯದ ಕುರಿತು ಆಯಾ ಇಲಾಖೆಯ ನೋಡಲ್ ಅಧಿಕಾರಿಗಳಿಗೆ, ಎಲ್ಲ ಚುನಾವಣಾ ತರಬೇತಿಗಳಲ್ಲಿ, ಚುನಾವಣೆ ಕುರಿತ ಮಾಧ್ಯಮ ಕಾರ್ಯಾಗಾರಗಳಲ್ಲಿ ವಿವರವಾದ ಮಾಹಿತಿ ನೀಡಲಾಗಿದೆ. ಆದರೂ ಕೆಲವರು ತಪ್ಪು ತಿಳುವಳಿಕೆಯಿಂದ ಇಡಿಸಿ ಸೌಲಭ್ಯದ ಬದಲಿಗೆ ಅಂಚೆಮತಪತ್ರ ಕೇಳಿ ಬರುತ್ತಾರೆ ಮತ್ತು ಅಂಚೆಮತದಾನಕ್ಕೆ ಮೂರು ದಿನಗಳ ಅವಕಾಶ ನೀಡಿದ್ದರೂ
ಹಾಗೂ ಇಡಿಸಿ ಸಲಭ್ಯ ಪಡೆಯಲು ಸಾಕಷ್ಟು ಸಮಯವಕಾಶವಿದ್ದರೂ ಗೊಂದಲ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅಂಚೆಮತದಾನ ಅಥವಾ ಇಡಿಸಿ ಸೌಲಭ್ಯದ ಮತದಾನ ಕುರಿತು ಗೊಂದಲಗಳಿದ್ದಲ್ಲಿ ಆಯಾ ಇಲಾಖೆಯಲ್ಲಿ ನೇಮಿಸಿರುವ ನೋಡಲ್ ಅಧಿಕಾರಿಗೆ ಸಂಪರ್ಕಿಸಿ ಅಥವಾ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದು ಎಂದು ಚುನಾವಣಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
**ಅಂಚೆಮತಪತ್ರದ ಮತದಾನ ಸೌಲಭ್ಯ ಕೇಂದ್ರಗಳಲ್ಲಿ 1262 ಮತದಾನ :** ನಿನ್ನೆ ಮೇ.01 ರಂದು ಜಿಲ್ಲೆಯ ಏಳು ವಿಧಾನಸಭಾ ಮತಕ್ಷೇತ್ರದ ಕೇಂದ್ರ ಸ್ಥಾನಗಳಲ್ಲಿ ಹಾಗೂ ಧಾರವಾಡ ತಹಸಿಲ್ದಾರ ಕಚೇರಿ ಆವರಣದಲ್ಲಿ ಸ್ಥಾಪಿಸಿದ್ದ
ಅಂಚೆಮತದಾನ ಸೌಲಭ್ಯ ಕೇಂದ್ರದಲ್ಲಿ ಹೊರ ಜಿಲ್ಲೆಯವರಾಗಿರುವ ಮತ್ತು ಧಾರವಾಡ ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುತ್ತಿರುವ 1262 ಜನ ಅಧಿಕಾರಿ ಮತ್ತು ಸಿಬ್ಬಂದಿ ಮತದಾರರು ತಾವು ಮತದಾರರಾಗಿರುವ ಲೋಕಸಭೆ ಮತಕ್ಷೇತ್ರದ ಚುನಾವಣೆಯ ಅಂಚೆಮತಪತ್ರದ ಮೇಲೆ ತಮ್ಮ ಮತದಾನದ ಹಕ್ಕನ್ನು ನಿಯಮಾನುಸಾರ ಚಲಾಯಿಸಿದ್ದಾರೆ.
ಮತ್ತು ಧಾರವಾಡ ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯನಿರತರಾಗಿರುವ 'ೀರೆ ಜಿಲ್ಲೆಗಳ ಮತದಾರರಾಗಿರುವ ಅಂಚೆಮತಪತ್ರ ಸೌಲಭ್ಯ ಪಡೆದವರು ಮೇ 3 ರ ವರೆಗೆ ಧಾರವಾಡ ತಹಸಿಲ್ದಾರ ಕಚೇರಿಯಲ್ಲಿ ತೆರೆದಿರುವ ಅಂಚೆಮತದಾನ ಸೌಲಭ್ಯ ಕೇಂದ್ರದಲ್ಲಿ ತಮ್ಮ ಮತದಾನದ ಹಕ್ಕು ಚಲಾಯಿಸಬಹುದು ಎಂದು ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಜ್ವಲ್ ವಿದೇಶಕ್ಕೆ ಪರಾರಿಯಾಗುವುದು ಏಕೆ ತಡೆಯಲಿಲ್ಲ: ದಿನೇಶ್ ಗುಂಡೂರಾವ್




**ಹುಬ್ಬಳ್ಳಿ :** 'ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ನಡೆಸಿದ ಲೈಂಗಿಕ ದೌರ್ಜನ್ಯ ಪ್ರಕರಣ ಮೊದಲೇ ಗೊತ್ತಿದ್ದರೂ ಜೆಡಿಎಸ್ ಜತೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿದ್ದು ಯಾಕೆ? ಅವರು ವಿದೇಶಕ್ಕೆ ಪರಾರಿಯಾಗುವುದನ್ನು ಏಕೆ ತಡೆಯಲಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.
'ಪೆನ್‌ಡ್ರೈವ್ ಕುರಿತು ಹಾಸನದ ಬಿಜೆಪಿ ಮುಖಂಡರೊಬ್ಬರು ಕಳೆದ ಡಿಸೆಂಬರ್‌ನಲ್ಲೇ ಅಮಿತ್ ಶಾ, ಬಿ.ವೈ.ವಿಜಯೇಂದ್ರ ಅವರಿಗೆ ಪತ್ರ ಬರೆದಿದ್ದರು. ಆದರೂ ಏಕೆ ಅವರಿಗೆ ಟಿಕೆಟ್ ನೀಡಲಾಯಿತು? ಪ್ರಧಾನಿ ನರೇಂದ್ರ ಮೋದಿ ಅವರೇ ಬಂದು ಪ್ರಜ್ವಲ್ ಪರ ಪ್ರಚಾರ ನಡೆಸಿದ್ದಾರೆ' ಎಂದು ಅವರು ಮಂಗಳವಾರ ಪತ್ರಿಕಗೋಷ್ಠಿಯಲ್ಲಿ ಹೇಳಿದರು.
'ಪ್ರಜ್ವಲ್ ವಿದೇಶಕ್ಕೆ ಪರಾರಿಯಾಗುವುದನ್ನು ತಡೆಯದಂತೆ ಜೆಡಿಎಸ್ ಮುಖಂಡರ ಒತ್ತಡ ಇತ್ತೇ? ಈ ವಿಷಯದಲ್ಲಿ ಬಿಜೆಪಿಯವರ ಡೋಂಗಿತನ ಜಗಜ್ಜಾಹೀರಾಗಿದೆ' ಎಂದು ಟೀಕಿಸಿದರು. 'ಹಾಸನದಲ್ಲಿ ಮಹಿಳೆಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದಿಂದ ಇಡೀ
ದೇಶವೇ ಬೆಚ್ಚಿ ಬಿದ್ದಿದೆ.
ಪೆನ್‌ಡ್ರೈನ್‌ನಲ್ಲಿರುವುದು ನಕಲಿ ವಿಡಿಯೊ ಎಂದು ಬಸವರಾಜ ಬೊಮ್ಮಾಯಿ ಹೇಳಿಕೆ ನೀಡುತ್ತಾರೆ. ಈ ಮೂಲಕ ಬಿಜೆಪಿಯವರು ಇದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ' ಎಂದು ಟೀಕಿಸಿದರು.
'ಪ್ರಕರಣವನ್ನು ಸಮರ್ಥಿಸಿಕೊಳ್ಳುವ ಬದಲು ಪ್ರಜ್ವಲ್ ರೇವಣ್ಣಗೆ ವಿದೇಶದಿಂದ ಕರೆಸಿ ಎಸ್‌ಐಟಿ ಎದುರು ಹಾಜರುಪಡಿಸಬೇಕು. ಇಲ್ಲದಿದ್ದರೆ, ಅಮಿತ್ ಶಾ, ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿಯವರಿಗೆ ಮಾತನಾಡುವ ನೈತಿಕತೆ ಇರುವುದಿಲ್ಲ' ಎಂದು ಹೇಳಿದರು.

# ಶಾಸ್ತ್ರಿ ಎನ್ನುವ 'ಸಿಂಪಲ್' ವ್ಯಕ್ತಿಯ ಬಗ್ಗೆ ನೀವು ತಿಳಿದುಕೊಳ್ಳಲೇಬೇಕು



ಈ ರಾಜಕಾರಣವೇ ಹೀಗೆ, ಅಧಿಕಾರದ ಗದ್ದುಗೆ ಏರಿದ ತಕ್ಷಣ ವ್ಯಕ್ತಿ ಆರ್ಭಟಿಸತೊಡಗುತ್ತಾನೆ. ದನಿಯಲ್ಲಿನ ಮಾರ್ಧವತೆ ಕಳೆದುಕೊಳ್ಳುತ್ತಾನೆ. ಏಕೆಂದರೆ ಆ ವ್ಯಕ್ತಿಗೆ ಬೇಕಾಗಿರುವುದು ಅಬ್ಬರದ ಪ್ರಚಾರ, ಸ್ವರಕ್ಷಣೆ ಮತ್ತು ಕುರ್ಚಿ ರಕ್ಷಣೆ. ಸಾಮಾನ್ಯವಾಗಿ ಇಂತಹ ನಾಯಕರನ್ನು ದಿನನಿತ್ಯ ನೋಡುತ್ತಲೇ ಇರುತ್ತೇವೆ.
ಆದರೆ ಇದಕ್ಕೆ ಅಪವಾದ ಎಂಬಂತೆ ಕೆಲವೊಬ್ಬ ಅಪರೂಪದ ನಾಯಕರು ಮೌನವಾಗಿ ದೇಶ ಮತ್ತು ಜನ ಹಿತಕ್ಕಾಗಿ ದುಡಿಯುತ್ತಿರುತ್ತಾರೆ. ಅಂಥವರು ಎಲ್ಲೋ ಅಪರೂಪ. ಈ ಅಪರೂಪದ ವಿಶಿಷ್ಟ ರಾಜಕಾರಣಿಗಳಲ್ಲಿ ಚಿರಂತನವಾಗಿ ಉಳಿದಿರುವ ಹೆಸರು ಲಾಲ್‌ಬಹುದ್ದೂರ್ ಶಾಸ್ತ್ರಿ . ಶಾಸ್ತ್ರಿಯವರ ವ್ಯಕ್ತಿತ್ವವೇ ವೈಶಿಷ್ಟ್ಯಪೂರ್ಣವಾದದ್ದು. ಈ ದೇಶದ ಎರಡನೇ ಪ್ರಧಾನಿಯಾಗಿ ಅವರು ಆಡಳಿತ ನಡೆಸಿದ್ದು ಕೆಲವು ಕಾಲ ಮಾತ್ರ. ಆದರೆ ಅವರ ಅಸಾಧಾರಣ ವ್ಯಕ್ತಿತ್ವ ಮತ್ತು ಯೋಜನೆಗಳಿಂದಾಗಿ ಸ್ವಾತಂತ್ರ್ಯ ನಂತರ ರಾಜಕಾರಣದ ಆಗಸದಲ್ಲಿ ಧ್ರುವತಾರೆಯಂತೆ ಇಂದಿಗೂ ಮಿನುಗುತ್ತಿದ್ದಾರೆ. ಅವರು ನಮ್ಮನ್ನಗಲಿ 50 ವರ್ಷಗಳೇ ಕಳೆದಿವೆ. ಆದರೆ ಇಂದಿನ ಅಬ್ಬರದ ಪ್ರಚಾರದ ರಾಜಕಾರಣದಲ್ಲಿ ಹೆಜ್ಜೆ ಹೆಜ್ಜೆಗೂ ಈ ವಾಮನಮೂರ್ತಿಯ ನೆನಪು ಕಾಡುತ್ತಲೇ ಇರುತ್ತದೆ.
ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಸ್ವಾತಂತ್ರ್ಯದ ಜೊತೆಗೆ ಬಡತನವನ್ನೂ ಬಳುವಳಿಯಾಗಿ ಕೊಟ್ಟು ಹೋದರು. ಇಂತಹ ಸ್ಥಿತಿಯಲ್ಲಿ ದೇಶವನ್ನು ಮುನ್ನೆಡೆಸುವುದು ಬಹು ಬಾರಿ ಸವಾಲಾಗಿತ್ತು. ನೆಹರು ನಂತರ ಶಾಸ್ತ್ರಿ ಆಡಳಿತ ಚುಕ್ಕಾಣಿ ಹಿಡಿದರು. ಈ ಶಾಸ್ತ್ರಿ ನೆಹರು ಅವರಂತೆ ಅಜಾನುಬಾಹುವೂ ಅಲ್ಲ , ಸುಂದರನೂ ಅಲ್ಲ. ಆಕರ್ಷಕ ವ್ಯಕ್ತಿತ್ವವಂತೂ ಇಲ್ಲವೇ ಇಲ್ಲ. ಆದರೆ ಅವರ ಅದ್ಭುತ ಇಚ್ಛಾಶಕ್ತಿ, ದೇಶಪ್ರೇಮ ಮತ್ತು ಜನಪರ ಕಾಳಜಿಗಳು ಇಡೀ ವಿಶ್ವವನ್ನೇ ಆಕರ್ಷಿಸಿದ್ದವು. ಒಂದು ಮಾತು ಹೇಳುವುದಾದರೆ ಗಾಂಧೀಜಿ, ಅಂಬೇಡ್ಕರ್ , ಶಾಸ್ತ್ರಿ ಇವರು ಬಾಯಿಂದ ಯಾವ ಸಂದೇಶದ ನುಡಿಮುತ್ತುಗಳನ್ನು ಬಡಬಡಿಸಲಿಲ್ಲ. ಆದರೆ ಅವರ ಮೌಲ್ಯಾಧಾರಿತ ಜೀವನವೇ ಭಾರತೀಯರ ಬದುಕಿನ ವಿಧಾನದ ಆದರ್ಶಗಳಾದವು.
ಶಾಸ್ತ್ರೀಜಿ ಅವರು ಅಂದಿನ ಸೀಮಿತ ಸಂಪನ್ಮೂಲಗಳನ್ನೇ ಬಳಸಿಕೊಂಡು ದೇಶವನ್ನು ಮುನ್ನಡೆಸಿದ ಚಾಣಾಕ್ಷತನ, ದಿಟ್ಟತನಗಳು, ಬರೀ ಬಾಯಿ ಮಾತನಲ್ಲೇ ಶತ್ರು ರಾಷ್ಟ್ರಗಳು ಬಾಲ ಮುದುರಿಕೊಳ್ಳುವಂತೆ ಮಾಡಿದ ಅವರು ರಾಜ ತಾಂತ್ರಿಕ ನೈಪುಣ್ಯ ಹಾಗೂ ದಿಟ್ಟತನಗಳು ಅನನ್ಯವಾದವು. ಒಂದು ನಿಗದಿತ ದಾಳಿಯನ್ನೇ ವಿಶ್ವದೆದುರು ಡಂಗೂರ ಸಾರುವ ಇಂದಿನ ರಾಜಕೀಯಕ್ಕೆ ಹೋಲಿಸಿದರೆ ಶಾಸ್ತ್ರಿಯವರ ರಾಜನೀತಿ ಮತ್ತು ರಾಜತಾಂತ್ರಿಕತೆಗಳು ಅದೆಷ್ಟು ಗಂಭೀರವಾಗಿದ್ದವು ಎಂಬುದು ಅರ್ಥವಾಗುತ್ತದೆ( ಯಾವುದೇ ದೇಶ ಶತ್ರು ದೇಶಗಳ ಮೇಲೆ ನಡೆಸುವ ನಿರ್ದಿಷ್ಟ ದಾಳಿ–ಸರ್ಜಿಕಲ್ ಅಟ್ಯಾಕ್ –ಬಗ್ಗೆ ಸಾರ್ವಜನಿಕವಾಗಿ ಬಹಿರಂಗಪಡಿಸುವಂತಿಲ್ಲ).
ಜೈ ಜವಾನ್– ಜೈ ಕಿಸಾನ್:
1964ರಲ್ಲಿ ಅಧಿಕಾರಕ್ಕೆ ಬಂದಾಗ ಜೈವಾನ್–ಜೈಕಿಸಾನ್ ಎಂಬ ಅಭೂತಪೂರ್ವ ಘೋಷಣೆಯೊಂದನ್ನು ಮೊಳಗಿಸಿ ಇಡೀ ದೇಶದಲ್ಲಿ ಸಂಚಲನ ಮೂಡಿಸಿದರು ಶಾಸ್ತ್ರಿ . ದೇಶದ ಉನ್ನತಿ ಸಾಧನೆಗೆ ಪ್ರಜೆಗಳ ಸುರಕ್ಷತೆಗೆ ರೈತರು ಮತ್ತು ವೀರ ಯೋಧರೇ ಮೂಲಾಧಾರ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವರು ಶಾಸ್ತ್ರೀ ಜಿ. ಅವರು ಅಧಿಕಾರ ವಹಿಸಿಕೊಂಡಾಗ ಭಾರತವು ಹೊರದೇಶಗಳಿಂದ ಪ್ರಮುಖವಾಗಿ ಅಮೆರಿಕದಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಇದಕ್ಕಾಗಿ ಭಾರತ ಹೊರದೇಶಗಳೆದುರು ಮೈ ಬಗ್ಗಿಸಿ ಕೈಯೊಡ್ಡಿ ಬೇಡಬೇಕಾಯಿತು. ಇದೇ ಹೊತ್ತಿನಲ್ಲಿ (1965) ಪಾಕಿಸ್ತಾನದ ವಿರುದ್ಧ ಯುದ್ಧವೂ ಸಂಭವಿಸಿಬಿಟ್ಟಿತು. ದೇಶದಲ್ಲಿ ಭಾರೀ ಕ್ಷಾಮ. ಜನ ಅನ್ನಕ್ಕಾಗಿ ಹಾತೊರೆಯುತ್ತಿದ್ದರು. ಆದರೂ ಶಾಸ್ತ್ರೀಜಿ ಎದೆಗುಂದಲಿಲ್ಲ. ದೇಶದ ಆಹಾರದ ಅಭಾವ, ಹಸಿವಿನಿಂದ ನರಳುತ್ತಿರುವ ಜನರನ್ನು ಗಮನದಲ್ಲಿಟ್ಟುಕೊಂಡು ಹಸಿವು ನೀಗಿಸುವ ನಿಟ್ಟಿನಲ್ಲಿ ವಾರಕ್ಕೊಮ್ಮೆ ಉಪವಾಸ ಆಚರಿಸುವಂತೆ ಇಡೀ ದೇಶಕ್ಕೆ ಮನವಿ ಮಾಡಿಕೊಂಡರು. ಕ್ಲಿಷ್ಟಕರ ಸಂದರ್ಭದಲ್ಲೇ ದೇಶಕ್ಕೆ ಅನ್ನ ನೀಡುವ ರೈತರು ಮತ್ತು ಗಡಿ ಕಾಯುವ ಯೋಧರ ಮಹತ್ವವನ್ನು ಜಗತ್ತಿಗೆ ಸಾರಲು ಜೈ ಜವಾನ್ –ಜೈ ಕಿಸಾನ್ ಎಂಬ ರಣಭೇರಿ ಮೊಳಗಿಸಿದರು.
ಅಮೆರಿಕ ಕಿವಿ ಹಿಂಡಿದ ಶಾಸ್ತ್ರಿ:
ಅಮೆರಿಕದಿಂದ ಆಹಾರ ಧಾನ್ಯ ತರಿಸಿಕೊಳ್ಳುತ್ತಿದ್ದ ಸಂದರ್ಭದಲ್ಲೇ ಶಾಸ್ತ್ರಿಯವರು ಅಮರಿಕದ ಪತ್ರಕರ್ತನೊಬ್ಬನಿಗೆ ನೀಡಿದ ಸಂದರ್ಶನದಲ್ಲಿ ಆ ರಾಷ್ಟ್ರ ವಿಯಟ್ನಾಂ ಮೇಲೆ ಯುದ್ಧ ಸಾರಿದ್ದನ್ನು ಅತ್ಯಂತ ಕಟು ಶಬ್ದಗಳಲ್ಲಿ ಟೀಕಿಸಿದರು. ಇದು ದುರಾಕ್ರಮಣ ಮತ್ತು ಅನ್ಯಾಯದ ಪರಮಾವಧಿ ಎಂದು ಹೇಳುವ ಮೂಲಕ ಅಂದಿನ ಅಮೆರಿಕ ಅಧ್ಯಕ್ಷ ಲಿಂಡನ್ ಜಾನ್ಸನ್ ಅವರ ಕೆಂಗೆಣ್ಣಿಗೆ ಗುರಿಯಾದರು. ಜಾನ್ಸನ್‌ತಕ್ಷಣವೇ ಆಹಾರ ಧಾನ್ಯ ಪೂರೈಕೆಯನ್ನು ಸ್ಥಗಿತಗೊಳಿಸಿಬಿಟ್ಟರು. ಇತ್ತ ದೇಶದಲ್ಲಿ ಹಸಿವಿನ ರುದ್ರ ನರ್ತನ. ಆಹಾರದ ಕೊರತೆ ಆದರೂ ಶಾಸ್ತ್ರೀಜಿ ಧೃತಿಗೆಡಲಿಲ್ಲ. ಆನಂತರದಲ್ಲಿ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ(ಯುಎನ್‌ಎಫ್‌ಎಒ) ಅಮೆರಿಕಕ್ಕೆ ತಿಳಿ ಹೇಳಿ ಆಹಾರ ಧಾನ್ಯ ಪೂರೈಕೆ ಪುನರಾರಂಭಿಸುವಂತೆ ಸೂಚಿಸಿದ್ದು ಈಗ ಇತಿಹಾಸ.
ಪಾಕ್ ವಿರುದ್ಧ ಯುದ್ಧ:
ಲಾಲ್‌ಬಹುದ್ದೂರ್ ಶಾಸ್ತ್ರಿ ಯಾವುದೇ ಸಮಸ್ಯೆಗಳನ್ನು ದಿಟ್ಟತನ ಹಾಗೂ ಧೈರ್ಯದಿಂದ ಎದುರಿಸುತ್ತಿದ್ದರು. ಆದರೆ ಅಬ್ಬರದ ಪ್ರಚಾರದಲ್ಲಿ ಕಿವಿ ಜೋತವರಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಪಾಕಿಸ್ತಾನ ವಿರುದ್ಧದ ಸಮರ. ಉಗ್ರರು ಇಂದನಂತೆಯೇ ಅಂದು ಕೂಡ ಗಡಿ ದಾಟಿ ಹಿಂಸಾಚಾರ ನಡೆಸುತ್ತಲೇ ಇದ್ದರು. 1965ರ ಸೆಪ್ಟೆಂಬರ್‌ನಲ್ಲಿ ಉಭಯ ದೇಶಗಳ ನಡುವೆ ಯುದ್ಧ ಆರಂಭವಾಗಿಯೇಬಿಟ್ಟಿತು. ಶಾಸ್ತ್ರಿ ಧೈರ್ಯದಿಂದ ಯುದ್ಧ ಎದುರಿಸಿದರು. ನಾವು ರಕ್ಷಣೆ ನೋಡಿಕೊಳ್ಳುತ್ತೇವೆ. ನಿಮ್ಮ ಕೆಲಸದಲ್ಲಿ ನೀವಿರಿ ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಭಾರತೀಯರಲ್ಲಿ ಧೈರ್ಯ ತುಂಬಿದರು. ಭಾರತೀಯ ಸೇನೆ ಪಾಕಿಸ್ತಾನವನ್ನು ಹಿಮ್ಮೆಟ್ಟಿಸಿತು. ಯುದ್ಧವೇನೋ ಅದೇ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡಿತಾದರೂ ಎರಡೂ ಕಡೆ ನಾಲ್ಕೈದು ಸಾವಿರ ಜೀವ ಹಾನಿ, ಅಪಾರ ಆಸ್ತಿ ಹಾನಿ ಉಂಟಾಗಿತ್ತು.
ಚೀನಾಕ್ಕೆ ತಿರುಗೇಟು:
ಭಾರತ ಪಾಕಿಸ್ತಾನ ಯುದ್ಧ ನಡೆಯುತ್ತಿರುವಾಗಲೇ ಇತ್ತ ಚೀನಾ ಕೂಡ ಕ್ಯಾತೆ ಶೂರು ಮಾಡಿತ್ತು. ಭಾರತೀಯ ಸೈನಿಕರು ಕದನ ವಿರಾಮಲ್ಲಂಘಿಸಿ ಅಕ್ರಮವಾಗಿ ನಮ್ಮ ಭೂಪ್ರದೇಶದಲ್ಲಿ ಯುದ್ಧೋಪಕರಣಗಳನ್ನು ಸಂಗ್ರಹಿಸುತ್ತಿದ್ದಾರೆ ಎಂಬ ಗಂಭೀರ ಆರೋಪ ಮಾಡಿತು. ಆದರೆ ಚೀನಾ ಹೇಳುತ್ತಿರುವುದು ಅಪ್ಪಟ ಸುಳ್ಳು ಎಂದು ಶಾಸ್ತ್ರೀಜಿ ವಿಶ್ವಕ್ಕೆ ಮನವರಿಕೆ ಮಾಡಿಕೊಟ್ಟರು. ನಂತರ ಚೀನಾ ತುಟಿ ಬಿಚ್ಚಲಿಲ್ಲ. ಭಾರತ–ಪಾಕಿಸ್ತಾನ ಯುದ್ಧ ಮುಗಿದ ನಂತರ ಎರಡೂ ದೇಶಗಳ ನಡುವೆ ಕದನ ವಿರಾಮ ಘೋಷಿಸಲು ವಿಶ್ವಸಂಸ್ಥೆ ಮುಂದಾಗುವಂತೆ ಶಾಸ್ತ್ರೀಜಿ ನೋಡಿಕೊಂಡರು.
ಈ ಸಂದರ್ಭ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಶಾಸ್ತ್ರೀಜಿ "ದೇಶದಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ. ಅಭಿವೃದ್ಧಿ ಕುಂಠಿತಗೊಂಡಿದೆ. ನಾವು ಯುದ್ಧ ಮುಂದುವರೆಸಿದರೆ ದೇಶದ ಜನತೆ ಹಸಿವು–ಬಡತನಗಳಲ್ಲೇ ಸಾಯಬೇಕೆ? ನಮಗೆ ಈಗ ಬೇಕಾಗಿರುವುದು ಶಾಂತಿ ಮತ್ತು ಅಭಿವೃದ್ಧಿ. ಯುದ್ಧವಲ್ಲ. ನಮ್ಮ ಸೈನಿಕರು ಮತ್ತು ಜನರ ಜೀವಗಳಿಗೆ ಅಪಾರ ಬೆಲೆಯಿದೆ. ಜೀವನಹಾನಿ ಆಸ್ತಿ ಹಾನಿ ತಪ್ಪಬೇಕು ಎಂದು ಗಟ್ಟಿ ಧ್ವನಿಯಲ್ಲಿ ಗುಡುಗಿದರು.




ಮಹಾನ್ ಮುತ್ಸದ್ದಿ : ತಮ್ಮ ಅಲ್ಪಾವಧಿ ಅಧಿಕಾರದಲ್ಲೇ ಪ್ರಧಾನಿ ಶಾಸ್ತ್ರೀ ರಷ್ಯಾ,ಯುಗೋಸ್ಲಾವಿಯಾ, ಇಂಗ್ಲೆಂಡ್, ಕೆನಡ, ಈಜಿಪ್ಟ್ , ನೇಪಾಳ, ಬರ್ಮ ಮುಂತಾದ ದೇಶಗಳನ್ನು ಸುತ್ತಿ ಭಾರತದ ಪ್ರತಿಷ್ಠೆ, ವರ್ಚಸ್ಸುಗಳನ್ನು ಹೆಚ್ಚಿಸಿದರು. ಈಜಿಪ್ಟ್ ರಾಜಧಾನಿ ಕೈರೋದಲ್ಲಿ ನಡೆದ ಅಲಿಪ್ತ ನೀತಿ ಸಮಾವೇಶ ಮುಗಿಸಿಕೊಂಡು ಹಿಂದಿರುಗುವಾಗ ಒಂದು ವಿಶೇಷ ನಡೆಯಿತು.
ಪಾಕಿಸ್ತಾನದ ಅಂದಿನ ಅಧ್ಯಕ್ಷ ಜನರಲ್ ಮೊಹಮ್ಮದ್ ಅಯೂಬ್ ಖಾನ್ ಅವರು ಶಾಸ್ತ್ರೀಜಿಯನ್ನು ಉಪಾಹಾರಕ್ಕೆ ಆಹ್ವಾನಿಸಿದರು. ಅದನ್ನು ಪ್ರೀತಿಯಿಂದ ಸ್ವೀಕರಿಸಿದ ಶಾಸ್ತ್ರಿ ಎಲ್ಲಾ ಶಿಷ್ಟಾಚಾರಗಳನ್ನು ಬದಿಗೊತ್ತಿ ಕೈರೋದಿಂದ ಬರುವ ಮಾರ್ಗಮಧ್ಯೆ ಕರಾಚಿ ವಿಮಾನ ನಿಲ್ದಾಣದಲ್ಲಿ ಇಳಿದರು. ಅಯೂಬ್ ಖಾನ್ ತಾವೇ ವಿಮಾನ ನಿಲ್ದಾಣಕ್ಕೆ ಬಂದು ಶಾಸ್ತ್ರೀಜಿಯನ್ನು ಸ್ವಾಗತಿಸಿದರು. ಇಬ್ಬರು ನಾಯಕರು ಕೆಲವು ಗಂಟೆಗಳ ಕಾಲ ಒಟ್ಟಿಗಿದ್ದು , ಒಟ್ಟಿಗೆ ಉಪಾಹಾರ ಸೇವಿಸಿದರು. ನಂತರ ಶಾಸ್ತ್ರೀ ಭಾರತಕ್ಕೆ ಹಿಂದಿರಗಿದರು.
ಇದು ಶಾಸ್ತ್ರೀಜಿಯವರ ರಾಜಕೀಯ ಮುತ್ಸದ್ದಿತನ ಮತ್ತು ಧೈರ್ಯ ದಿಟ್ಟತನಗಳ ನಡೆಯಾಗಿತ್ತು. ಆದರೆ ಅದಾವುದನ್ನೂ ಅವರು ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ.
ಅಗಲಿದ ಮಹಾನ್ ಚೇತನ:
ಭಾರತ–ಪಾಕಿಸ್ತಾನಗಳ ನಡುವೆ ಕದನ ವಿರಾಮ ಘೋಷಣೆಯಾದ ನಂತರ ಉಜ್ಬೇಕಿಸ್ತಾನದ ಮುಖ್ಯಸ್ಥ ಅಲೆಕ್ಸಿ ಕೊಸಿಗಿನ್ ಅವರು ತಾಷ್ಕೆಂಟ್‌ನಲ್ಲಿ ಏರ್ಪಡಿಸಿದ ಸಂಧಾನ ಸಭೆಯಲ್ಲಿ ಶಾಸ್ತ್ರೀಜಿ ಮತ್ತು ಪಾಕ್ ಅಧ್ಯಕ್ಷ ಅಯೂಬ್ ಖಾನ್ ಪಾಲ್ಗೊಂಡಿದ್ದರು. 1966ರ ಜ.10ರಂದು ಇಬ್ಬರು ನಾಯಕರೂ ಕೊಸಿಗಿನ್ ಉಪಸ್ಥಿತಿಯಲ್ಲಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದರು. ಇದೇ ಸಂತೋಷದಲ್ಲಿ ತಾಷ್ಕೆಂಟ್‌ನ ಅತಿಥಿ ಭವನದಲ್ಲಿ ರಾತ್ರಿ ಮಲಗಿದ ಭಾರತದ 2ನೇ ಪ್ರಧಾನಿ ಶಾಸ್ತ್ರಿ ಜ.11ರ ಸೂರ್ಯೋದಯವನ್ನು ನೋಡಲೇ ಇಲ್ಲ. ಶಾಸ್ತ್ರೀಜಿ 1966 ಜ.11 ಬೆಳಗಿನ ಜಾವ ಹೃದಯಾಘಾತಕ್ಕೆ ಬಲಿಯಾಗಿದ್ದರು. ಅವರ ಸಾವು ಇಂದಿಗೂ ನಿಗೂಢವಾಗಿಯೇ ಉಳಿದಿದೆ.

* * *

# ಬಿಜೆಪಿ ಮುಖಂಡ ವಿಜುಗೌಡರಿಂದ ಜೀವ ಬೆದರಿಕೆ: ರಕ್ಷಣೆ ಕೋರಿ ಎಂಎಲ್ಸಿ ಸುನೀಲಗೌಡರಿಂದ ಸಿಎಂಗೆ ಮನವಿ

**ವಿಜಯಪುರ :** ಬಿಜೆಪಿ ಮುಖಂಡ ವಿಜುಗೌಡ ಪಾಟೀಲ ಹಾಗೂ ಅವರ ಜನರಿಂದ ತನಗೆ ಜೀವ ಬೆದರಿಕೆ ಇದ್ದು, ಸೂಕ್ತ ರಕ್ಷಣೆ ಒದಗಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಮನವಿ ಮಾಡಿಕೊಂಡಿದ್ದಾರೆ.

ಶುಕ್ರವಾರ ನಗರದಲ್ಲಿ ಪತ್ರಿಕಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಜುಗೌಡ ಜೊತೆಗಿರುವ ಸರ್ದಾರ್ ಜೀಗಳು ನನಗೆ ಬಹಿರಂಗವಾಗಿಯೇ ಜೀವ ಬೆದರಿಕೆ ಹಾಕಿದ್ದು, ಈ ಬಗ್ಗೆ ಈಗಾಗಲೇ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ, ಗೃಹ ಸಚಿವರ ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಹೊರ ರಾಜ್ಯಗಳಿಂದ ಬಂದಿರುವ ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಸರ್ದಾರಜಿಗಳ ಬಗ್ಗೆ ಸಮಗ್ರ ತನಿಖೆ ನಡೆಸಲು ಒತ್ತಾಯ ಕೂಡಾ ಮಾಡಿದ್ದಾಗಿ ಅವರು ಹೇಳಿದ್ದಾರೆ. ವಿಜುಗೌಡರು ನನ್ನ ಮೇಲೆ ಆಗಾಗ ಗೂಂಡಾಗಿರಿ, ದಬ್ಬಾಳಿಕೆ ಮಾಡಿ ಜೀವ ಬೆದರಿಕೆ ಹಾಕುತ್ತಲೇ ಬಂದಿದ್ಧಾರ. ಮತ್ತೆ ನನ್ನ ಮೇಲೆಯೇ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದರು.

ವಿಜುಗೌಡರ ಹಿಂದೆ ಇರುವ ಸರ್ದಾರ್ ಜೀಗಳು ಅನೇಕ ರೀತಿಯ ಶಸ್ತ್ರಾಸ್ತ್ರಗಳು ಇರಿಸಿಕೊಂಡಿದ್ದಾರೆ, ವಿಜುಗೌಡರು ಸರ್ದಾರಜಿಯನ್ನು ತನ್ನ ಗನ್ ಮ್ಯಾನ್ ಎಂದು ಹೇಳುತ್ತಾರೆ, ಈ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕಾಗುತ್ತದೆ. ಈ ಬಗ್ಗೆ ಪೊಲೀಸರು ವಿಚಾರಣೆ ನಡೆಸಿದರೆ ಸರ್ದಾರ ಜೀ ನನಗೆ ಗೊತ್ತಿಲ್ಲ, ಮದುವೆಗೆ ಬಂದಿರಬಹುದು ಎಂದು ಹೇಳಿ ಜಾರಿಕೊಳ್ಳುವ ಪ್ರಯತ್ನವನ್ನು ವಿಜುಗೌಡರು ಮಾಡಿದ್ದಾರೆ ಎಂದು ಸುನೀಲಗೌಡರು ದೂರಿದರು.



ಇದಲ್ಲದೆ ಏ.26 ರಂದು ಬಬಲೇಶ್ವರ ಕಾಂಗ್ರೆಸ್ ಕಾರ್ಯಕರ್ತರು ರಾಹುಲ್ ಗಾಂಧಿ ಅವರ ಕಾರ್ಯಕ್ರಮಕ್ಕೆ ವಿಜಯಪುರಕ್ಕೆ ಆಗಮಿಸುತ್ತಿದ್ದರು, ಅವರನ್ನು ಹಲಗಣಿ ಕ್ರಾಸ್ ಬಳಿ ತಡೆದು ಬೆದರಿಕೆ ಹಾಕಿ ಓಡಿಸಿದ್ದಾರೆ, ಏ.28 ರಂದು ಮದುವೆ ಕಾರ್ಯಕ್ರಮದಲ್ಲಿ ಘಟನೆಗೆ ಸಂಬಂಧಿಸಿದಂತೆ ಸರ್ದಾರ್ ಜೀ ನನಗೆ ಮನೆಗೆ ನುಗ್ಗಿ ಕೊಲೆ ಮಾಡುತ್ತೇನೆ ಎಂದು ಹಿಂದಿ ಭಾಷೆಯಲ್ಲಿ ಜೀವ ಬೆದರಿಕೆ ಹಾಕಿದ್ದಾರೆ. ಆಗ ಕಾರಿನಲ್ಲಿದ್ದ ವಿಜುಗೌಡ ಸರ್ದಾರಜಿಗೆ ಬುದ್ಧಿವಾದ ಹೇಳದೆ ಅವರೂ ಕೂಡಾ ನನಗೆ ಆವಾಜ್ ಹಾಕಿ ಸರ್ದಾರಜಿ ಬೆಂಬಲಕ್ಕೆ ನಿಂತರು ಎಂದರು.

ಏ.28 ರಂದು ಮಹೇಶ್ವರಿ ಮಂಗಲ ಕಾರ್ಯಾಲಯದಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ತಕ್ಷಣ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಲಿಖಿತ ದೂರು ಸಲ್ಲಿಸಿದ್ದೇನೆ, ಇಷ್ಟೇ ಅಲ್ಲದೆ ಈ ಎಲ್ಲ ಘಟನೆಗಳ ಬಗ್ಗೆ ಡಿಐಜಿ, ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳ ಕಚೇರಿಗೆ ಬೆಂಗಳೂರಿಗೆ ತೆರಳಿ ಲಿಖಿತ ಮಾಹಿತಿ ನೀಡಿದ್ದೇನೆ ಎಂದರು.

ಜೈಲಿನಲ್ಲಿರುವ ಕೈದಿಗಳಿಗೆ ನಿಕಟ ಸಂಪರ್ಕ

ವಿಜುಗೌಡರ ಬಳಿ ನಾಲ್ಕೈದು ಜನ ಸರ್ದಾರ ಜೀ ಇದ್ದಾರೆ. ಅವರು ತಮ್ಮ ಬಳಿ ಶಸ್ತ್ರಾಸ್ತ್ರಗಳನ್ನು ಇರಿಸಿಕೊಂಡಿದ್ದಾರೆ,

ಜೈಲಿನಲ್ಲಿರುವ ಕುಖ್ಯಾತ ಕ್ರಿಮಿನಲ್‌ಗಳ ಜೊತೆಗೂ ವಿಜುಗೌಡರಿಗೆ ನಂಟು ಇರುವ ಶಂಕೆಯೂ ಇದೆ, ವಿಜಯಪುರ ದರ್ಗಾ ಜೈಲಿನಲ್ಲಿರುವ ಕೈದಿಗಳಿಗೆ ಸಾರಾಯಿ, ಸಿಮ್ ಕಾರ್ಡ್, ಗಾಂಜಾ, ಊಟ ಪೂರೈಸುವ ನಿಟ್ಟಿನಲ್ಲಿಯೂ ವಿಜುಗೌಡರ ಪಾತ್ರವಿರಬಹುದು ಎಂದು ಸುನೀಲಗೌಡ ಪಾಟೀಲ ಆರೋಪಿಸಿದರು.

ಸರ್ದಾರ್ ಜೀ ಯಾರು, ಅವರನ್ನು ಕರೆ ತಂದವರು ಯಾರು? ಗನ್ ಮ್ಯಾನ್ ಇರಿಸಿಕೊಳ್ಳಲು ಅನುಮತಿ ಪಡೆದುಕೊಂಡಿದ್ದಾರೋ? ಆ ಸರ್ದಾರ್ ಜೀ ಟೆರರಿಸ್ಟ್ ಸಹ ಇದ್ದರೂ ಇರಬಹುದು, ಹೀಗಾಗಿ ಸಮಗ್ರ ತನಿಖೆಯಾಗಬೇಕು,? ಎಲ್ಲ ಬೆಳವಣಿಗೆಗಳಿಂದ ನನಗೆ ಜೀವ ಭಯ ಕಾಡುತ್ತಿದೆ. ಹೀಗಾಗಿ ಸೂಕ್ತ ರಕ್ಷಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇನೆ ಎಂದರು.

# ಸೂಕ್ಷ್ಮ ಮತಗಟ್ಟೆಗಳಿಗೆ ಅಧಿಕಾರಿಗಳ ಭೇಟಿ



**ತೇರದಾಳ :** ಮೇ. 7ರಂದು ಲೋಕಸಭೆ ಚುನಾವಣೆಗೆ ಮತದಾನ ನಡೆಯಲಿದ್ದು, ಕಾಲತಿಪ್ಪಿ ಹಾಗೂ ಹಳಿಂಗಳಿ ಗ್ರಾಮಗಳ ಸೂಕ್ಷ್ಮ ಮತಗಟ್ಟೆಗಳಿಗೆ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಸಾಜೀದ ಮುಲ್ಲಾ ಬೇಟಿ ನೀಡಿ ಪರಿಶೀಲಿಸಿದರು.

ಮತದಾವನ್ನು ಶಾಂತಿಯುತವಾಗಿ ನಡೆಸಿ. ಯಾವುದೇ ಗಲಾಟೆಗೆ ಅವಕಾಶ ಕೊಡಬೇಡಿ. ಮತದಾನ ಎಂದರೆ ಪ್ರಜಾಪ್ರಭುತ್ವದ ಪವಿತ್ರವಾದ ಹಬ್ಬ. ಆದ್ದರಿಂದ ಇಂತಹ ಹಬ್ಬದ ದಿನದಂದು ಗಲಾಟೆ ಮಾಡಿಕೊಳ್ಳದೆ ಹೆಚ್ಚಿನ ಮತದಾನ ಮಾಡುವಲ್ಲಿ ಸಹಕರಿಸಿ ಎಂದು ರಾಜಕೀಯ ಮುಖಂಡರುಗಳಿಗೆ ಮನವಿ ಮಾಡಿದರು.

ತಹಸೀಲ್ದಾರ್ ಗಿರೀಶ ಸ್ವಾದಿ, ಬನಹಟ್ಟಿ ಸಿಪಿಐ ಸಂಜೀವ ಬಳಗಾರ, ಪಿಎಸ್ಐ ಅಪ್ಪು ಐಗಳಿ, ವಿವೇಕ ಸುವರ್ಣಖಂಡಿ ಇನ್ನಿತ ಅಧಿಕಾರಿಗಳು ಇದ್ದರು.

# ರಾಜು ಆಲಗೂರರಿಗೆ ಕುರುಬ ಸಮಾಜದ ಬೆಂಬಲ

**ವಿಜಯಪುರ :** ಕುರುಬ ಸಮಾಜ ಯಾವತ್ತೂ ನ್ಯಾಯದ ಪರವಾಗಿದೆ. ಹಾಗಾಗಿ ಯೋಗ್ಯ ಅಭ್ಯರ್ಥಿಯಾದ ರಾಜು ಆಲಗೂರರಿಗೆ ಬೆಂಬಲ ನೀಡುತ್ತದೆ ಎಂದು ಮಾಜಿ ಜಿಪಂ ಅಧ್ಯಕ್ಷ ಹಾಗೂ ಜಿಲ್ಲೆಯ ಕುರುಬ ಸಮಾಜದ ಮುಖಂಡ ಮಲ್ಲಪ್ಪ ಸಾಲಿ ಹೇಳಿದರು.

ಶುಕ್ರವಾರ ಸಿಂದಗಿಯಲ್ಲಿ ನಡೆದ ಕುರುಬ ಸಮುದಾಯದ ಬೃಹತ್ ಸಭೆಯಲ್ಲಿ ಮಾತನಾಡಿದರು.

ಆಲಗೂರರು ಚಳವಳಿ, ಹೋರಾಟದಿಂದ ಬಂದವರು. ನಮ್ಮಂತಹ ತಳ ಸಮುದಾಯದ ಜೊತೆ ಅವರು ಮೊದಲಿಂದ ಬೆರೆತಿದ್ದಾರೆ. ಅಹಿಂದ ಚಳವಳಿಗೆ ಅವರು ಬೆನ್ನೆಲುಬಾಗಿದ್ದರು. ಹಾಗಾಗಿ ನಮ್ಮ ಸಮುದಾಯ ಅವರ ಗೆಲುವಿಗೆ ಸಹಕರಿಸಬೇಕು ಎಂದು ಕೋರಿದರು.

ರಾಜ್ಯ ಸರಕಾರದ ಸಾಧನೆಗೆ ಕಾರಣರಾಗಿರುವ ಸಿದ್ದರಾಮಯ್ಯರ ಕೈಬಲಪಡಿಸಲು ಆಲಗೂರರಿಗೆ ಮತ ಹಾಕಬೇಕು. ಜಾತಿರಹಿತ ಸಮಾಜಕ್ಕಾಗಿ ನಾವು ಒಟ್ಟಾಗಬೇಕು. ಲೋಕಸಭೆ ಕ್ಷೇತ್ರದಲ್ಲಿ ಈ ಸಲ ಬದಲಾವಣೆ ತರಲು ಕುರುಬ ಸಮಾಜ ಕಾರಣವಾಗಬೇಕು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ. ಮಹಾದೇವಪ್ಪ ಅವರು ಮಾತನಾಡಿ, ಕುರುಬ ಸಮಾಜ ಒಟ್ಟಾಗಿ ಸಭೆ ನಡೆಸಿದ್ದು ಸಂತೋಷ. ಇಲ್ಲಿ ಎಲ್ಲ ಸಮುದಾಯದವರೂ ಇದ್ದಾರೆ. ದೇಶಕ್ಕೆ ಒಳ್ಳೆಯದಾಗಲು ಈ ಸಭೆ ಮಹತ್ವದ್ದಾಗಿದೆ. ರಾಜ್ಯದಲ್ಲಿ ನಾವು ಗೆದ್ದಂತೆ ದೇಶದ ಚುನಾವಣೆಯಲ್ಲೂ ನಾವು ಗೆಲ್ಲಬೇಕು. ಇಷ್ಟೊಂದು ಗಟ್ಟಿಯಾಗಿ ಗೆಲ್ಲಲು ಕಾರಣರಾದ ನೀವು ಲೋಕಸಭೆಯಲ್ಲೂ ಬಹುಮತ ಕೊಡಬೇಕು. ಸಮರ್ಥ ಅಭ್ಯರ್ಥಿ ಆಲಗೂರರಿಗೆ ಮತ ನೀಡಬೇಕು ಎಂದರು. ಅಭ್ಯರ್ಥಿ ರಾಜು ಆಲಗೂರ ಅವರು ಮಾತನಾಡಿ,ನಾನು ಲೋಕಸಭೆಗೆಸ್ಪರ್ಧಿಸಲುಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರಣ. ಅವರೇ ನನಗೆ ಟಿಕೆಟ್ ನೀಡಿದ್ದಾರೆ. ಕರ್ನಾಟಕದಲ್ಲಿ ಹಾಲು ಮತ ಸಮುದಾಯ ರಾಜ್ಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎಂದರು.

ನಾನು ಸಮಾಜದ ಯಾವ ವ್ಯಕ್ತಿಯನ್ನು ಜಿಲ್ಲೆಯಲ್ಲಿ ಏಕವಚನದಲ್ಲೂ ಮಾತನಾಡಿಸಿಲ್ಲ. ಹಾಗೇನಾದರೂ ಮಾಡಿದ್ದರೆ, ಇದನ್ನು ಜಿಗಜಿಣಗಿಯವರು ಸಾಬೀತು ಮಾಡಿದರೆ ಚುನಾವಣೆ ಕಣದಿಂದಲೇ ನಿವೃತ್ತಿಯಾಗುವೆ. ನನ್ನಿಂದ ಲಿಂಗಾಯತರಿಗೆ ತೊಂದರೆಯಾಗುತ್ತೆ ಎಂದಿರುವ ಅವರು ಸಣ್ಣತನಕ್ಕೆ ಇಳಿದಿದ್ದಾರೆ. ಮೋದಿ ಅವರು ಕೂಡ ಇದೇ ದಾರಿ ಹಿಡಿದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಂಬಿಕೆ ಹಾಗೂ ವಿಶ್ವಾಸಕ್ಕೆ ಕುರುಬ ಸಮಾಜ ಹೆಸರಾಗಿದೆ. ನನಗೆ ಅವಕಾಶ ನೀಡಿದರೆ ನಿಮ್ಮ ವಿಶ್ವಾಸ ಕಾಯ್ದುಕೊಳ್ಳುವ ಕೆಲಸ ಮಾಡುವೆ ಎಂದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ, ಇದು ಮಹತ್ವದ ಚುನಾವಣೆ. ದೇಶ ಉಳಿಸುವ ಹೋರಾಟವಿದು. ಕಾಂಗ್ರೆಸ್ ಮಾಡಿದ ಕೆಲಸಗಳಿಗಾಗಿ ನಡೆದಿರುವ ಚುನಾವಣೆ ಇದಾಗಿದೆ. ಮೋದಿ ಹೇಳಿರುವುದು ಯಾವುದೂ ಆಗಿಲ್ಲ. ಕುರುಬ ಸಮಾಜ ಒಗ್ಗಟ್ಟಾಗಿ ಅಭಿವೃದ್ಧಿ ಪರವಿರುವ ವ್ಯಕ್ತಿಗೆ ಮತ ನೀಡಬೇಕು.

ಆಲಗೂರರು ಜಿಲ್ಲೆಯ ಏಳಿಗೆಗಾಗಿ ಹತ್ತು ಅಂಶದ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ರಾಜ್ಯಕ್ಕೆ ಸಿದ್ದರಾಮಯ್ಯರಂತಹ ಧೀಮಂತರನ್ನು ಕೊಡುಗೆ ನೀಡಿದ ಸಮಾಜ ನಿಮ್ಮದು. ನೀವು ಗೆಲುವಿಗೆ ಕಾರಣರಾಗಿ ಎಂದರು.

ಮಾಜಿ ಶಾಸಕ ಶರಣಪ್ಪ ಸುಣಗಾರ ಮಾತನಾಡಿ, ಇದು ಸತ್ಯ–ಅಸತ್ಯದ,ಧರ್ಮ–ಅಧರ್ಮದ ನಡುವಿನ ಚುನಾವಣೆ. ದೇಶದಲ್ಲಿ ಕೆಟ್ಟ ಆಡಳಿತದಿಂದ ಕರಾಳ ಛಾಯೆ ಆವರಿಸಿದೆ. ಮೋದಿ ಮುಖ ನೋಡಿ ಯಾಕೆ ಮತ ಹಾಕಬೇಕು. ಅಭಿವೃದ್ಧಿಯ ಹರಿಕಾರ ಸಿದ್ದರಾಮಯ್ಯರ ಮುಖ ನೋಡಿ ಮತ ಹಾಕುವ ಅಗತ್ಯ ಇದೆ ಎಂದು ಹೇಳಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡವರ ಬಾಳು ಬೆಳಗಲಿದೆ.

ರಾಜ್ಯದಂತೆ ದೇಶದಲ್ಲೂ ಗ್ಯಾರಂಟಿಗಳ ಯೋಜನೆ ಜಾರಿಗೆ ಬರಲಿವೆ. ಬೆಲೆ ಏರಿಕೆಯಿಂದ ಜನ ಬೇಸತ್ತಿದ್ದಾರೆ.

# ಜೆವಿ ಮಂಡಳ ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ ಯಶಸ್ಸು ಬದುಕಿನ ಸೂತ್ರ ಶಿಕ್ಷಣ: ಡಿ.ಆರ್. ಪಾಟೀಲ



**ತೇರದಾಳ :** ನಮ್ಮ ಜೀವನದಲ್ಲಿ ಯಶಸ್ಸು ಹೊಂದಬೇಕಾದರೆ ಅದಕ್ಕೆ ಶಿಕ್ಷಣ ಎಂಬ ಸೂತ್ರವನ್ನು ಸರಿಯಾಗಿ ಪಾಲನೆ ಮಾಡಬೇಕು. ಅವಾಗಲೇ ನೀವು ಸಾಧನೆ ಶಿಖರ ಏರಲು ಸಾಧ್ಯ ಎಂದು ಇಲ್ಲಿನ ಜೆವಿ ಮಂಡಳ ಕಾರ್ಯಾಧ್ಯಕ್ಷ ಡಿ.ಆರ್. ಪಾಟೀಲ ಹೇಳಿದರು.

ಸಂಸ್ಥೆ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸತ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಸ್ಥೆ ಕಾರ್ಯದರ್ಶಿ ಡಾ. ಜೆ.ಬಿ. ಆಲಗೂರ, ಬದುಕಿನಲ್ಲಿ ನೀವು ಎಷ್ಟೇ ಎತ್ತರಕ್ಕೆ ಬೆಳೆದರು ತಂದೆ ತಾಯಿ ಹಾಗೂ ಕಲಿತ ಶಾಲೆ ಕಲಿಸಿದ ಶಿಕ್ಷಕರ ಋಣ ಮರೆಯಬೇಡಿ. ನೀವು ಸಮಾಜದಲ್ಲಿ ಉನ್ನತ ಸ್ಥಾನ ಹೊಂದುವುದೇ ನೀವು ಅವರಿಗೆ ಕೊಡುವ ಗೌರವ ಎಂದು ಹೇಳಿ ಸಂಸ್ಥೆ ಕೀರ್ತಿ ಹೆಚ್ಚಿಸದ ವಿದ್ಯಾರ್ಥಿಗಳಿಗೆ ಅಭಿನಂದನೆ ಹೇಳಿದರು. ಐಶ್ವರ್ಯ ಕೌಜಲಗಿ, ಅಕ್ಷತಾ ಸಾರಾಪುರ, ಮಂಗಲಾ ಪಠಾಣಿ ಹಾಗೂ ತೇಜಶ್ವಿನಿ ಕಡಕೋಳ ಅವರನ್ನು ಸಂಸ್ಥೆ ವತಿಯಿಂದ ಸತ್ಕರಿಸಲಾಯಿತು. ಸದಸ್ಯರಾದ ಪದ್ಮಜಿತ ಹಟ್ಟಿ, ಕಿರಣ ಕುಳ್ಳಿ, ಬಿ.ಡಿ. ಬದನಿಕಾಯಿ, ಪ್ರಾಚಾರ್ಯ ಸಂತೋಷ ಕುಳ್ಳಿ, ಎಸ್.ಎನ್. ಹೆಬ್ಬಾಳೆ, ಡಿ.ಬಿ. ಪಾಟೀಲ ಮತ್ತಿತರಿದ್ದರು.

# ಹಾವೇರಿ ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಪಕ್ಷದ ಅಭ್ಯರ್ಥಿ ಬಸವರಾಜ್ ಬೊಮ್ಮಾಯಿಯವರು 2 ಲಕ್ಷ ಮತಗಳಿಂದ ಗೆಲವು ಖಚಿತ–ರಾಘವೇಂದ್ರ ಪರಸಪ್ಪ ಪರಾಪೂರ್

**ಗದಗ :** ಕಳೆದ ಒಂದು ವಾರದಿಂದ ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಗದಗ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧ್ಯಕ್ಷರಾದ ರಾಘವೇಂದ್ರ ಪರಸಪ್ಪ ಪರಾಪೂರ್ ಅವರ ನೇತೃತ್ವದಲ್ಲಿ ನಗರದ ವಾರ್ಡ್ ನಂಬರ್ 16ರಲ್ಲಿ ಹಾವೇರಿ–ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಪಕ್ಷದ ಅಭ್ಯರ್ಥಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರ ಪರವಾಗಿ ಮನೆ ಮನೆಗೆ ತೆರಳಿ ಪ್ರಚಾರ ಮಾಡುತ್ತಿದ್ದಾರೆ.

ಈ ಪ್ರಚಾರ ಸಂದರ್ಭದಲ್ಲಿ ರಾಘವೇಂದ್ರ ಪರಸಪ್ಪ ಪರಾಪೂರ ಮಾತನಾಡಿ 2024ರ ಲೋಕಸಭಾ ಚುನಾವಣೆ ದೇಶದ ಭದ್ರತೆ ಸುರಕ್ಷತೆಗಾಗಿ ನರೇಂದ್ರ ಮೋದಿಯವರು ಮೂರನೇ ಅವಧಿಗೆ ಪ್ರಧಾನಿಯಾಗುವುದು ಅತ್ಯಂತ ಅವಶ್ಯವಾಗಿದೆ. ಈಗಿನ ರಾಜ್ಯದ ಕಾಂಗ್ರೆಸ್ ಸರಕಾರ ಜನತೆಗೆ ಐದು ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ. ಈ 5 ಗ್ಯಾರಂಟಿಗಳು ರಾಜ್ಯದ ಜನತೆಗೆ ಮತ್ತು ರಾಜ್ಯದ ಅಭಿವೃದ್ಧಿಗೆ ಯಾವುದೇ ರೀತಿಯ ಅನುಕೂಲಕರವಾಗಿಲ್ಲ. ಇದೊಂದು ತಾತ್ಕಾಲಿಕ ಆಮಿಷವಾಗಿದೆ. ಇನ್ನು ನರೇಂದ್ರ ಮೋದಿಯವರು ಮೂರನೇ ಅವಧಿಗೆ ಪ್ರಧಾನಿಯಾದರೆ ಸಂವಿಧಾನ ಬದಲಾವಣೆ ಮಾಡಲಾಗುತ್ತದೆ ಎಂದು ರಾಜ್ಯದ ಕಾಂಗ್ರೆಸ್ ನಾಯಕರು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ.

ಕಾರಣ ಎಲ್ಲ ದಲಿತ ಸಮುದಾಯದ ಜನತೆ ಈ ಬಗ್ಗೆ ಕಿವಿಗೊಡದೆ ಬಿಜೆಪಿಗೆ ಮತ ನೀಡಬೇಕೆಂದು ದಲಿತ ಸಮುದಾಯದ ಬಾಂಧವರಲ್ಲಿ ಕಳಕಳಿಯಾಗಿ ವಿನಂತಿಸಿದರು. ನರೇಂದ್ರ ಮೋದಿ ಅವರು



ಗುಜರಾತ ರಾಜ್ಯದ ಮುಖ್ಯಮಂತ್ರಿಯಾಗಿ 15 ವರ್ಷ ಮತ್ತು 10 ವರ್ಷಗಳ ಪ್ರಧಾನಮಂತ್ರಿಗಳಾಗಿ ದೇಶದ ಜನತೆಗಾಗಿ ಹಗಲಿರುಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂತಹ ಪ್ರಧಾನಿಯವರ ಕುಟುಂಬದ ಸಹೋದರರು ಅವರು ಕುಟುಂಬ ವರ್ಗದವರು ಸಾಮಾನ್ಯ ಜನರಂತೆ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇಂತಹ ಪ್ರಾಮಾಣಿಕ ಪ್ರಧಾನ ಮಂತ್ರಿ ಸಿಕ್ಕಿರುವುದು ನಮ್ಮ ದೇಶದ ಪುಣ್ಯವಾಗಿದೆ. ಸಂವಿಧಾನ ಬಗ್ಗೆ ಹಾಗೂ ಡಾ॥ ಬಿ ಆರ್ ಅಂಬೇಡ್ಕರ ಅವರ ಬಗ್ಗೆ ನರೇಂದ್ರ ಮೋದಿಯುವರು ಅಪಾರ ಗೌರವ ಹೊಂದಿದ್ದಾರೆ.

ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳು ಈ ಚುನಾವಣೆ ನಂತರ ಬಂದಾಗುವುದು ಖಚಿತ. ಏಕೆಂದರೆ ನರೇಂದ್ರ ಮೋದಿಯವರ ಆಡಳಿತದ ಬಗ್ಗೆ ಕಳೆದ ಹತ್ತು ವರ್ಷಗಳಿಂದ ಎಲ್ಲ ತರದ ಆಪಾದನೆ ಮಾಡಿದರು ಜನತೆ ಅವರ ಮೇಲೆ ವಿಶ್ವಾಸವನ್ನು ಇಟ್ಟಿದ್ದಾರೆ. ಅದಕ್ಕಾಗಿ ಈ ಬಾರಿಯಾದರೂ ಅವರನ್ನು ಸೋಲಿಸಲು ಜನತೆಗೆ ಅದರಲ್ಲೂ ಮಹಿಳೆಯರಿಗೆ ಈ ಗ್ಯಾರೆಂಟಿಗಳ ಆಮಿಷವನ್ನು ನೀಡಿ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಪ್ರಯತ್ನ ಇದಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ದಲಿತರಿಗೆ ಮೀಸಲಿಟ್ಟ 11,000 ಕೋಟಿ ಹಣವನ್ನು ಈ ಗ್ಯಾರೆಂಟಿಗೆ ಉಪಯೋಗಿಸಲಾಗಿದೆ. ಇದು ದಲಿತರ ಅಭಿವೃದ್ಧಿಗೆ ಮಾಡಿದ ಅನ್ಯಾಯವಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ದಲಿತ, ಹಿಂದುಳಿದ,ಅಲ್ಪಸಂಖ್ಯಾತ ಸೇರಿದಂತೆ ಬಡ ವಿದ್ಯಾರ್ಥಿಗಳಿಗೆ ಬರುತ್ತಿದ್ದ ಸ್ಕಾಲರ್‌ಶಿಫ್ ನಿಲ್ಲಿಸಲಾಗಿದೆ. 5 ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಹಣ ರಾಜ್ಯದ ಎಲ್ಲ ಮಹಿಳೆಯರಿಗೆ ಬಂದಿಲ್ಲ. ಈ ಗ್ಯಾರಂಟಿಗಾಗಿ ಬಾಂಡ್, ಆಸ್ತಿಗಳ ಮಾರಾಟದ ನೊಂದಣಿ ಶುಲ್ಕವನ್ನು ಎರಡು ಪಟ್ಟು ಹೆಚ್ಚಿಸಲಾಗಿದೆ. ಸಾರಾಯಿ ಬೆಲೆಯನ್ನು ಸಹ ಎರಡು ಪಟ್ಟು ಹೆಚ್ಚಿಸಲಾಗಿದೆ. ಈ ಎಲ್ಲ ಹಣವನ್ನು ಕೇವಲ ಲೋಕಸಭಾ ಚುನಾವಣೆ ಗೆಲ್ಲುವ ಸಲುವಾಗಿ ಉಪಯೋಗಿಸಲಾಗುತ್ತದೆ. ಈಗಾಗಲೇ ಈ ಗ್ಯಾರೆಂಟಿಗಾಗಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ನಿಂತಿವೆ. ಈ ಕಾಂಗ್ರೆಸ್ ಸರ್ಕಾರ ಎಲ್ಲ ಸಮುದಾಯದ ವಿರೋಧಿ ಸರ್ಕಾರವಾಗಿದೆ. ಆದ್ದ–ರಿಂದ ದೇಶದ ರಕ್ಷಣೆಗಾಗಿ, ದೇಶದ ಅಭಿವೃದ್ಧಿಗಾಗಿ, ದೇಶದ ಮಹಿಳೆಯರಿಗಾಗಿ, ದೇಶದ ರೈತರಿಗೆ, ಬಡವರಿಗೆ ಸೇರಿದಂತೆ ಸಬ್‌ಕಾ ಸಾಥ್, ಸಬ್ ವಿಕಾಸ್, ಎಂಬ ಘೋಷಣೆಯೊಂದಿಗೆ ದೇಶದ ಎಲ್ಲ ವರ್ಗದ ಸಮುದಾಯವರಿಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಮೂರನೇ ಬಾರಿಗೆ ಆಯ್ಕೆಯಾಗುವುದು ನಿಶ್ಚಿತ ಇವರ ಅಭಿವೃದ್ಧಿ ಕಾರ್ಯಗಳಿಂದ ಪ್ರಚಾರದ ವೇಳೆಯಲ್ಲಿ ಜನತೆಯ ಸ್ಪಂದನೆ ಉತ್ತಮವಾಗಿರುವುದರಿಂದ ಹಾವೇರಿ ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಪಕ್ಷದ ಅಭ್ಯರ್ಥಿ ಸರಳ ಸಜ್ಜನ ವ್ಯಕ್ತಿಯಾದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಸುಮಾರು 2 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ರಾಘವೇಂದ್ರ ಪರಸಪ್ಪ ಪರಾಪೂರ ವಿಶ್ವಾಸ ವ್ಯಕ್ತಪಡಿಸಿದರು.

# ಸಂಸ್ಕಾರವಂತರಾಗಿ ಬಾಳಬೇಕು: ಹರ್ಷಾನಂದ ಶ್ರೀಗಳು




**ಜಮಖಂಡಿ :** ಸತ್ಯವನ್ನು ನುಡಿಯಬೇಕು. ಧರ್ಮದಿಂದ ನಡೆಯಬೇಕು. ತಂದೆ–ತಾಯಿ, ಗುರುಹಿರಿಯರನ್ನು ಗೌರವಿಸಬೇಕು. ಜೀವನದಲ್ಲಿ ಸಂಸ್ಕಾರವಂತರಾಗಿ ಬಾಳಬೇಕು ಎಂದು ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಶ್ರೀಗುರುದೇವ ಯೋಗಕೇಂದ್ರದ ಆಶ್ರಯದಲ್ಲಿ ಶಾಲಾ ಮಕ್ಕಳಿಗಾಗಿ ಆಯೋಜಿಸಿದ್ದ 10 ದಿನಗಳ ಸಂಸ್ಕಾರ ಶಿಬಿರದ ಮಂಗಳವಾರ ನಡೆದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮೈಗೂರಿನ ಶಿವಾನಂದ ಮಠದ ಗುರುಪ್ರಸಾದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಜೀವನದಲ್ಲಿ ಕಲಿಯುವುದು ಬಹಳವಿದೆ. ಪ್ರತಿನಿತ್ಯ ಯೋಗ ಮತ್ತು ಧ್ಯಾನ ಮಾಡಿ ದೇಶಕ್ಕೆ ಯೋಗ್ಯ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದು ಆಶೀರ್ವಚನ ನೀಡಿದರು. ಬಸವಜ್ಯೋತಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಅತಿಥಿಗಳಾಗಿ ಮಾತನಾಡಿ, ಹಿಂದೆ ಕೈಗೊಂಡ ಉತ್ತಮ ಕ್ರಿಯೆಗಳು ಮತ್ತು ಮಾಡಿದ ಒಳ್ಳೆಯ ಆಲೋಚನೆಗಳು ಮನಸ್ಸಿನ ಮೇಲೆ ಬೀರುವ ಪ್ರಭಾವನ್ನು ಸಂಸ್ಕಾರ ಎನ್ನುತ್ತಾರೆ ಎಂದರು. ನಿವೃತ್ತ ಶಿಕ್ಷಕ ಗುರುನಾಥ ಸುತಾರ ಅತಿಥಿಗಳಾಗಿ ಮಾತನಾಡಿ, ಸಂಸ್ಕಾರವಿಲ್ಲದ ಮನೆ ಮತ್ತು ಮನಸ್ಸು ಸ್ಮಶಾನವಿದ್ದಂತೆ. ಆದ್ದರಿಂದ ಸಂಸ್ಕಾರ ಮೈಗೂಡಿಸಿಕೊಳ್ಳಬೇಕು ಎಂದರು.

ನಿವೃತ್ತ ಶಿಕ್ಷಕ ಗಣಪತಿ ಗಲಗಲಿ ಅತಿಥಿಗಳಾಗಿ ಮಾತನಾಡಿ, ಸಂಸ್ಕಾರ ಶಿಬಿರದಲ್ಲಿ ಪಾಲ್ಗೊಂಡು ಜೀವನ ಪಾವನ ಮಾಡಿಕೊಂಡಿದ್ದೀರಿ. ತಂದೆ–ತಾಯಿಗಳ ಋಣ ದೊಡ್ಡದು. ಆದ್ದರಿಂದ ತಂದೆ–ತಾಯಿಗಳ ಮಾತುಗಳನ್ನು ಪಾಲಿಸಬೇಕು ಎಂದರು.

ಶಿಬಿರಾರ್ಥಿಗಳಾದ ಸಾಗರ ತೋಳಮಟ್ಟಿ, ಪ್ರಥ್ವಿರಾಜ ಹೊನಗೌಡ, ಕಿರಣ ಮುದ್ನೂರ, ಸಾಗರ ತಮದಡ್ಡಿ, ದರ್ಶಿಲ ಯಲಗಾರ, ಅಭಿಷೇಕ ಮಂಟೂರ, ಮಲ್ಲು ಮಂಟೂರ, ವಿನಾಯಕ ಪಾಟೀಲ, ನವೀನ ಶಿಬಿರ ಕುರಿತು ತಮ್ಮ ಅನಿಸಿಕೆ ಹಂಚಿಕೊಂಡರು. ಪಾಲಕರ ಪರವಾಗಿ ಬಿಆರ್‌ಪಿ ಎಸ್.ಆರ್. ಮುದ್ನೂರ ಮಾತನಾಡಿದರು. ಸಾಗರ ಸ್ವಾಗತಿಸಿದರು. ಭಗವಂತ ನಿರೂಪಿಸಿದರು. ವಿಕಾಸ ಹಂಚಿನಾಳ ವಂದಿಸಿದರು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

# ಅವಳಿ ನಗರದ ಹಲವಾರು ನಾಗರಿಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ

**ಗದಗ :** ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಮೆಚ್ಚಿಕೊಂಡು ಗದಗ ಶಹರದ ಬಿಜೆಪಿ ಕಾರ್ಯಕರ್ತರು ಇತ್ತೀಚಿಗೆ ಜರುಗಿದ ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಎಚ್ ಕೆ ಪಾಟೀಲ್ ಸಾಹೇಬರ ಸಮ್ಮುಖದಲ್ಲಿ ಹಲವಾರು ನಾಗರಿಕರು ತಮ್ಮ ಮಾತೃ ಪಕ್ಷವನ್ನು ತೊರೆದು ಕಾಂಗ್ರೆಸ್ ಪಕ್ಷವನ್ನುಸೇರಿದರು.ಅವರಲ್ಲಿಪ್ರಮುಖವಾಗಿಚಾಂದಸಾಬ್ ಕೊಟ್ಟೂರ, ಸಲ್ಮಾನ್ ಬನ್ನೂರ್ ಹಾಗೂ ಇನ್ನಿತರರು ಬಿಜೆಪಿ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಚುನಾವಣೆಯಲ್ಲಿ ಭರವಸೆ ನೀಡಿದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಜನರ ಸಂಕಷ್ಟಕ್ಕೆ ನೆರವಾಗಿರುತ್ತದೆ. ಹಾವೇರಿ ಗದಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ರವರ ಗೆಲುವು ಸುನಿಶ್ಚಿತವಾಗಿದ್ದು ಅದರಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠಗೆಲುವುಸಾಧಿಸಲಿದ್ದಾರೆಎಂದುಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಎಚ್ ಕೆ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ಗದಗ ಬೆಟಗೇರಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಬಿ ಬಿ ಅಸೂಟಿ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಅಶೋಕ ಮಂದಾಲಿ, ಮತ್ತಿತರರು ಉಪಸ್ಥಿತರಿದ್ದರು.



# ಶ್ರೀಮತಿ ಭಾಗವ್ವ ರಾ. ವಾಜಂತ್ರಿ ನಿಧನ



**ರಬಕವಿ :** ಇಲ್ಲಿಯ ಎಂ.ವಿ. ಪಟ್ಟಣ ಪ್ರೌಢಶಾಲೆಯ ಶಿಕ್ಷಕ, ಸಾಹಿತಿ, ಪತ್ರಕರ್ತ ಯಶವಂತ ವಾಜಂತ್ರಿ ಅವರ ಮಾತೋಶ್ರೀ ಶ್ರೀಮತಿ ಭಾಗವ್ವ ರಾಮಚಂದ್ರ ವಾಜಂತ್ರಿ ಮೇ. ಒಂದರಂದು ನಿಧನ ಹೊಂದಿದರು. ಅವರಿಗೆ ೮೮ ವರ್ಷ ವಯಸ್ಸಾಗಿತ್ತು.

ಕಳೆದ ಎಪ್ರಿಲ್ ೨೪ ರಂದಷ್ಟೇ ಇವರ ಪತಿ ರಾಮಚಂದ್ರ ವಾಜಂತ್ರಿ ನಿಧನರಾಗಿದ್ದರು. ಕೇವಲ ಒಂದೇ ವಾರದಲ್ಲಿ ಪತಿಯ ಪಾದ ಸೇರಿಕೊಂಡರು.

ಇವರು ತಮ್ಮ ಹಿಂದೆ ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಫಕೀರಪ್ಪ ದಢೂತಿ ನಿಧನ



**ಬನಹಟ್ಟಿ :** ಇಲ್ಲಿಯ ಮಂಗಳವಾರ ಪೇಟೆ ನಿವಾಸಿ ಫಕೀರಪ್ಪ ದಢೂತಿ ತಮ್ಮ 88 ನೆಯ ವಯಸ್ಸಿನಲ್ಲಿ ಮೇ. 2 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State